# ಮಾರ್ಕ್ಸ್ ಮತ್ತು ಸಮಾಜವಾದಿಗಳು

—-----------------------

ಸಮಾಜವಾದಿ ಕಲ್ಪನೆಗಳು, ವಿಶೇಷವಾಗಿ ಎಲ್ಲರಿಗೂ ಸಮಾನವಾದ ಆಸ್ತಿಯನ್ನು ಜಾರಿಗೆ ತರಬೇಕು ಎಂದು ಕರೆಕೊಟ್ಟ ಕ್ರಿಶ್ಚಿಯನ್ ಧರ್ಮದಲ್ಲೇ ತನ್ನ ಬೇರುಗಳನ್ನು ಹೊಂದಿದೆ. ತನ್ನ *ಯುಟೋಪಿಯಾ*ದಲ್ಲಿ (1516), ಇಂಗ್ಲೆಂಡಿನ ರಾಜಕೀಯ ಚಿಂತಕನೂ, ರಾಜನೀತಿಜ್ಞನೂ (ರಾಜಕೀಯ ಮುತ್ಸದ್ದಿ)ಮಾನವತಾವಾದಿಯೂ ಆದ ಥಾಮಸ್ ಮೂರ್ (1478– 1535) ಅಂತಹ ಕ್ರಿಶ್ಚಿಯನ್ ಮೂಲಗಳನ್ನು ಆಧರಿಸಿ ಒಂದು ರೀತಿಯ ಸಾಮ್ಯವಾದಿ (ಕಮ್ಯುನಿಸ್ಟ್) ಸಮಾಜದ ಕಲ್ಪನೆಯನ್ನು ಅಭಿವೃದ್ಧಿ ಪಡಿಸಿದನು. ಆದರೆ ಕೈಗಾರಿಕಾ ಕ್ರಾಂತಿಯ ನಂತರ 19ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಮಾಜಿಕ ಪ್ರಶ್ನೆಯು ಹೊರಹೊಮ್ಮುವವರೆಗೂ ಸಮಾಜವಾದಿ ಕಲ್ಪನೆಗಳು ನಿಜಕ್ಕೂ ಪ್ರಭಾವವನ್ನು ಗಳಿಸಿಕೊಂಡಿರಲಿಲ್ಲ. ನಾವು ಆರಂಭಕಾಲದಲ್ಲಿ ಬಂದ ಆದರ್ಶ ರಾಜ್ಯದ (ಯುಟೋಪಿಯ) ಕಾಲ್ಪನಿಕ ಸಮಾಜವಾದಿಗಳಾದ ಹೆನ್ರಿ ಡೇ ಸ್ಯೆಂಟ್ ಸೈಮನ್ (1760- 1825), ಚಾರಲ್ಸ್ ಪೂರಿಯೇ (1772 1837), ಪಿಯರೇ ಜೋಸೆಫ್ ಪ್ರೌಧನ್ (1809 –1865) ಎಂಬ ಫ್ರೆಂಚ್ ಚಿಂತಕರನ್ನು, ವೇಲ್ಸ್ ಪ್ರದೇಶಕ್ಕೆ ಸೇರಿದ ರಾಬರ್ಟ್ ಓವೆನ್ (1771-1858) ಅವರನ್ನು ಮತ್ತು ಜರ್ಮನಿಯ ಜೋಹಾನ್ ಕಾರ್ಲ್ ರಾಡ್ ಬರ್ಟಸ್ (1805–1875) ಇವರನ್ನು ಹೆಸರಿಸಲೇಬೇಕು. ಇವರಲ್ಲಿ ಬಹುತೇಕ ಜನರು ಸಾಮಾಜಿಕ ಸುಧಾರಕರಾಗಿದ್ದು ಸಹಕಾರಿ ಚಳುವಳಿಯನ್ನು ಆರಂಭಿಸಿದವರು ಮತ್ತು ಬೆಂಬಲಿಸಿದವರು ಹಾಗೂ ಒವೆನ್ ರವರು ಇಂಡಿಯಾನಾದ ವಾಬಾಷ್ ನದಿಯ ತೀರದಲ್ಲಿ ನ್ಯೂ ಹಾರ್ಮೋನಿ ಅಂತಹ ಪ್ರಾಯೋಗಿಕ ಕಾಲೋನಿಗಳನ್ನು ಆರಂಭಿಸಿದವರು. ಅವರು ಅನೇಕ ದೇಶಗಳಲ್ಲಿ ಕೆಲವೊಂದು ಸಂಸ್ಥೆಗಳನ್ನು ಮತ್ತು ಶಾಸನಗಳನ್ನು ರೂಪಿಸುವುದರಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಇದಲ್ಲದೆ ಎಷ್ಟೋ ಜನ ಮಾರ್ಜಿನಲ್ (ಸೀಮಾಂತ) ಅರ್ಥಶಾಸ್ತ್ರಜ್ಞರಿದ್ದು ಅವರು ಕೆಲವೊಂದು ಸಮಾಜವಾದಿ ಕಲ್ಪನೆಗಳ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದರು ಮತ್ತು ಭೂಮಿಯನ್ನು ಸಾಮಾಜಿಕರಣಗೊಳಿಸಬೇಕು ಎಂಬುದನ್ನು ಪ್ರತಿಪಾದಿಸಿದರು. ( ಇದಕ್ಕೆ ಗೊಸ್ಸೆನ್ ಮತ್ತು ಲಿಯಾನ್ ವಾಲ್ರಸ್ ಅವರನ್ನು ಉದಾಹರಿಸಬಹುದು : ನೋಡಿ: ಅಧ್ಯಾಯ 4). ಅಮೆರಿಕಾದ ಅರ್ಥಶಾಸ್ತ್ರಜ್ಞ ಮತ್ತು ರಾಜಕಾರಣಿಯಾದ ಹೆನ್ರಿ ಜಾರ್ಜ್ (1839– 1897) ಎಂಬಾತನು ತನ್ನ 'ಪ್ರೋಗ್ರೆಸ್ ಮತ್ತು ಪಾವರ್ಟಿ' ಎಂಬ 1879ರ ಪುಸ್ತಕದಲ್ಲಿ ಭೂಮಿಯನ್ನು ಸಾಮೂಹಿಕ ಆಸ್ತಿಯನ್ನಾಗಿ ಪರಿವರ್ತಿಸಬೇಕು ಎಂದು ಕರೆ ನೀಡಿದನು. ಭೂಮಿಯ ಮೇಲೆ ಸಂಗ್ರಹಿಸಲಾಗುವ ಬಾಡಿಗೆ ಹಣವು ಎಲ್ಲ ನಾಗರಿಕರಿಗೂ ಸೇರಿರುತ್ತದೆ,

ಅದು ಕೇವಲ ಭೂಮಿಯ ಮಾಲೀಕರಿಗಲ್ಲ ಎಂಬುದು ಅವನ ಚಿಂತನೆಗೆ ಆಧಾರವಾದ ತೀರ್ಮಾನವಾಗಿತ್ತು.

ಅದೇನೇ ಇರಲಿ ನಿಸ್ಸಂಶಯವಾಗಿಯೂ ಅತ್ಯಂತ ಪ್ರಮುಖ ಸಮಾಜವಾದಿ ಲೇಖಕನೆಂದರೆ ಕಾರ್ಲ್ ಮಾರ್ಕ್ಸ್ ; ಆತನ ನೆರವಿಗಿದ್ದಾತನೆಂದರೆ ಮಾರ್ಕ್ಸ್ ನ ಗೆಳೆಯ ಮತ್ತು ಬೌದ್ಧಿಕ ಸೆಣೆಸಾಟದ ಸಹವರ್ತಿ ಫ್ರೆಡರಿಕ್ ಏಂಗೆಲ್ಸ್ (1820 -1895). ನಾವೀಗ ಆತನ ಕೊಡುಗೆಗಳತ್ತ ಗಮನಹರಿಸೋಣ.

ಏಂಗೆಲ್ಸ್, **ಕಾರ್ಲ್ ಮಾರ್ಕ್ಸ್** ನನ್ನು ವೈಜ್ಞಾನಿಕ ಸಮಾಜವಾದದ ಸ್ಥಾಪಕ ಎಂದು ಕರೆದ. ಏಕೆಂದರೆ ಮಾರ್ಕ್ಸ್, ಸಮಾಜವಾದವು ಅಸ್ತಿತ್ವಕ್ಕೆ ಬರುವುದು ಅನಿವಾರ್ಯ ಸಾಧ್ಯತೆ ಎಂಬುದನ್ನು ಪ್ರದರ್ಶಿಸಿದನು ಎಂದು ಹೇಳಲಾಗುತ್ತದೆ. ಬಂಡವಾಳವಾದದ ಚಲನೆಯ ನಿಯಮಗಳನ್ನು ಬಿಚ್ಚಿಟ್ಟವನು ಎಂಬ ಹೆಗ್ಗಳಿಕೆಯನ್ನು ಮಾರ್ಕ್ಸ್ ನಿಗೆ ನೀಡಲಾಗುತ್ತದೆ. ಮಾರ್ಕ್ಸ್ ಕ್ಯಾಪಿಟಲ್ (ಬಂಡವಾಳ) ಎಂಬ ತನ್ನ ಕೃತಿಯಲ್ಲಿ ಹೀಗೆ ಬರೆದ. “ಬಂಡವಾಳದ ಚಾರಿತ್ರಿಕ ಕರ್ತವ್ಯ ಮತ್ತು ಅದರ ಅಸ್ತಿತ್ವಕ್ಕೆ ಸಮರ್ಥನೆ ಎಂದರೆ ಅದು ಸಾಮಾಜಿಕ ಶ್ರಮದ ಉತ್ಪಾದನಾ ಶಕ್ತಿಗಳನ್ನು ಅಭಿವೃದ್ಧಿಪಡಿಸಿದ್ದು. ಒಂದು ಉನ್ನತ ಉತ್ಪಾದನಾ ವಿಧಾನವೊಂದಕ್ಕೆ (ಸಮಾಜವಾದಕ್ಕೆ) ಭೌತಿಕ ಅಗತ್ಯಗಳನ್ನು ಅಪ್ರಜ್ಞಾಪೂರ್ವಕವಾಗಿಯೇ ಸೃಷ್ಟಿಸುವ ರೀತಿ ಇದು”. ಅದೇ ಸಮಯದಲ್ಲಿ ಮಾರ್ಕ್ಸ್ ಹೇಳುವುದೇನೆಂದರೆ ಲಾಭದ ಸಾಮಾನ್ಯ ದರವು ಬಂಡವಾಳಶಾಹಿ ವ್ಯವಸ್ಥೆಯ ಅತ್ಯಂತ ಮುಖ್ಯ ಚರಾಂಶ (ವೇರಿಯಬಲ್ - ಬದಲಾಗುವ) ಆಗಿದ್ದು, ಅದು ಕುಸಿಯುತ್ತಾ ಹೋಗುವ ಪ್ರವೃತ್ತಿಯನ್ನು ಹೊಂದಿದೆ ಮತ್ತು ಇದು ಬಂಡವಾಳವಾದವು ಸಮಾಜವಾದಕ್ಕೆ ದಾರಿ ಮಾಡಿಕೊಡುವುದಕ್ಕೆ ಅನುಕೂಲ ಒದಗಿಸುತ್ತದೆ . ಆಸ್ತಿ ಸಂಬಂಧಗಳು ಮತ್ತು ವಿಶೇಷವಾಗಿ ಬಂಡವಾಳ ಮತ್ತು ಶ್ರಮದ ನಡುವಿನ ಸಂಘರ್ಷವನ್ನು ಮಾರ್ಕ್ಸ್ *ಉತ್ಪಾದನಾ ಸಂಬಂಧಗಳು* ಎಂದು ಕರೆಯುತ್ತಾನೆ. ಅವನ ಪ್ರಕಾರ ಉತ್ಪಾದನಾ ಸಂಬಂಧಗಳು, ಉತ್ಪಾದನಾ ಶಕ್ತಿಗಳ ಮುಂದುವರೆದ ಅಭಿವೃದ್ಧಿಗೆ ಅಡ್ಡಿಯಾಗುತ್ತವೆ. ಅಂಥ ಸಂದರ್ಭದಲ್ಲಿ ಬಂಡವಾಳವಾದ ಕರ್ತವ್ಯ ಮುಗಿದಿದ್ದು, ಅದು ರಂಗದಿಂದ ಹೊರಕ್ಕೆ ಸರಿಯಬೇಕಾಗುತ್ತದೆ.

ನಾವು ಈ ವಾದವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಾನವನ ಕ್ರಿಯೆಗಳಿಗೆ ಬಯಸದೇ ಬಂದ ಪರಿಣಾಮಗಳಿರುತ್ತವೆ ಎಂಬ ಚಿಂತನೆಯ ಮತ್ತೊಂದು ಸ್ವರೂಪ ಇದಾಗಿದೆ ಅನಿಸುತ್ತದೆ ಅಥವಾ ಕಾಣದ ಕೈನ ಚಳಕ ಎಂದೂ ಸಹ ನಾವು ಹೇಳಬಹುದು. ಬಂಡವಾಳಗಾರರು ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಅವಿರತವಾಗಿ ಶ್ರಮಿಸುವಾಗ ಅವರು ತಮಗೆ ಗೊತ್ತಿಲ್ಲದೆ ಅಥವಾ ಮುಂಗಾಣದಿದ್ದ ಇನ್ನೊಂದು ಪ್ರಕ್ರಿಯೆಯನ್ನು ಆರಂಭಿಸಿಬಿಟ್ಟಿರುತ್ತಾರೆ. ಅವರ ವೈಯಕ್ತಿಕ ತೀರ್ಮಾನಗಳು ಕೆಲವೊಂದು ಪರಿಣಾಮಗಳಿಗೆ ಕಾರಣವಾಗಿ ಅವು ಅವರ ಸಾಮೂಹಿಕ ಸ್ಥಿತಿ ಮತ್ತು ಹಿತಾಸಕ್ತಿಯನ್ನು ಬುಡಮೇಲು

ಮಾಡುತ್ತಾ ಬಂಡವಾಳಶಾಹಿ ಸಮಾಜವನ್ನೇ ಗುಡಿಸಿ ಹಾಕಿಬಿಡುತ್ತವೆ. ಅವರ ಆಕಾಂಕ್ಷೆಗಳಿಂದಲೇ ಚಾಲನೆಗೆ ಬಂದ, ಆದರೆ ಅವರನ್ನೇ ಸೋಲಿಸುವಂತಹ ಶಕ್ತಿಗಳು ಕ್ರಮೇಣ ಅವರ ಬೆನ್ನ ಹಿಂದೆ ನಿಧಾನವಾಗಿ ಪ್ರಾಬಲ್ಯವನ್ನು ಗಳಿಸಿಕೊಳ್ಳುತ್ತವೆ. ಮಾರ್ಕ್ಸ್ ಸ್ಪಷ್ಟವಾಗಿಯೇ ಇತಿಹಾಸದ ಒಂದು ಚಮತ್ಕಾರವನ್ನು ಅವಲಂಬಿಸಿದ್ದ; ಅದೇನೆಂದರೆ ಬಂಡವಾಳಗಾರರು ತಾವೇ ಪ್ರಾಬಲ್ಯವನ್ನು ಸಾಧಿಸಿರುವ ಉತ್ಪಾದನಾ ವಿಧಾನದ ಮೂಲಕ ಪ್ರತಿಕ್ಷಣವೂ ಹೆಚ್ಚು ಹೆಚ್ಚು ಲಾಭಗಳನ್ನು ಹಿಂಡಿಕೊಳ್ಳುತ್ತಾ ಉದ್ದೇಶವಿಲ್ಲದೆಯೇ ಮಾನವನಿಂದ ಮಾನವನ ಶೋಷಣೆಯು ಇಲ್ಲವಾಗುವಂತಹ ವರ್ಗರಹಿತ ಸಮಾಜದ ಹೊರಹೊಮ್ಮುವಿಕೆಗೆ ನೆರವಾಗಿರುತ್ತಾರೆ.

ಮಾರ್ಕ್ಸ್ ತನ್ನ 'ಕ್ಯಾಪಿಟಲ್– ಎ ಕ್ರಿಟಿಕ್ ಆಫ್ ಪೊಲಿಟಿಕಲ್ ಎಕಾನಮಿ'( ಬಂಡವಾಳ- ರಾಜಕೀಯ ಅರ್ಥಶಾಸ್ತ್ರದ ಒಂದು ವಿಮರ್ಶೆ) ಎಂಬ ಪ್ರಮುಖ ಕೃತಿಯನ್ನು ಮುಗಿಸಲು ವಿಫಲನಾದ.. ಆತನ ಜೀವಿತ ಕಾಲದಲ್ಲಿ ಮುಗಿಸಲಾಗಿದ್ದು ಸಂಪುಟ ಒಂದನ್ನು ಮಾತ್ರ –' ದ ಪ್ರೋಸೆಸ್ ಆಫ್ ಪ್ರೊಡಕ್ಷನ್ ಆಫ್ ಕ್ಯಾಪಿಟಲ್'( 1867) ಎಂಬುದು ಪ್ರಕಟಿತವಾಯಿತು. ಮಾರ್ಕ್ಸ್ ನ ಬರವಣಿಗೆಯ ಸಂಗ್ರಹದಿಂದ ಏಂಗೆಲ್ಸ್ ಗೆಳೆಯನ ಮರಣಾನಂತರ ಸಂಪುಟ ಎರಡು (1885) ಮತ್ತು ಸಂಪುಟ ಮೂರನ್ನು (1894) ಪ್ರಕಟಿಸಿದರು. ನಮಗೀಗ ತಿಳಿದಿರುವಂತೆ, ಮಾರ್ಕ್ಸ್- ಏಂಗೆಲ್ಸ್ ಕಲೆಕ್ಟಡ್ ವರ್ಕ್ಸ್ (ಮೆಗಾ) (ಸಮಗ್ರ ಕೃತಿಗಳ), ಮಾರ್ಕ್ಸ್ ಗೆ ತನ್ನ ಕೃತಿಯು ಪ್ರಕಟಣೆಗೆ ಅಗತ್ಯವಾದ ಪ್ರಬುದ್ಧತೆಯನಿನ್ನೂ ಪಡೆದುಕೊಂಡಿಲ್ಲ ಎನಿಸಿತ್ತು ಮತ್ತು ಅವನಿಗೆ ತನ್ನ ಕೆಲವೊಂದು ದೃಷ್ಟಿಕೋನಗಳ ಬಗ್ಗೆ ಸಂದೇಹಗಳು ಹುಟ್ಟಿಕೊಂಡಿದ್ದವು. ಬಹುಶಃ ಬಹಳ ಮುಖ್ಯವಾಗಿ, ಅವನ ಸಿದ್ಧಾಂತವನ್ನು ಕುರಿತು ಮರುಚಿಂತನೆ ನಡೆಸಲು ಪ್ರಬಲ ಹೊಸ ಪುರಾವೆ ಸಿಕ್ಕಿತ್ತು. ಬಹಳ ಕಾಲ ಅವರು ಬಂಡವಾಳವಾದದ ಮತ್ತು ಅದರ ಅಭಿವೃದ್ಧಿಯನ್ನು ನಿಯಂತ್ರಿಸುವ ನಿಯಮಗಳಿಗೆ ಸಂಬಂಧಪಟ್ಟಂತೆ ಬ್ರಿಟನ್ ದೇಶವು ಮುಖ್ಯ ಉದಾಹರಣೆ ಎಂದುಕೊಂಡಿದ್ದ. ಕೊನೆಯ ದಿನಗಳಲ್ಲಿ ಅವನ ಗಮನವನ್ನು ಅಮೆರಿಕೆಯ ಸಂಯುಕ್ತ ಸಂಸ್ಥಾನ ಸೆಳೆದುಕೊಂಡಿತ್ತು, ಅದಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ಸಾಮಗ್ರಿ ಬಹಳ ಉನ್ನತವಾದುದಾಗಿತ್ತು ಮತ್ತದರ ಚಲನಾವೇಗವು ಕಡಿಮೆಯಾಗುವ ಸೂಚನೆ ಕಂಡುಬಂದಿರಲಿಲ್ಲ.

## ಅಮೆರಿಕ ಸಂಯುಕ್ತ ಸಂಸ್ಥಾನ ಕುರಿತು ಮಾರ್ಕ್ಸ್ ಮತ್ತು ಏಂಗೆಲ್ಸ್

'ನ್ಯೂಯಾರ್ಕ್ ಟ್ರಿಬ್ಯುನ್' ಪತ್ರಿಕೆಗೆ ಪ್ರಮುಖ ಲೇಖನ ಬರೆಯುವ ಲೇಖಕರಾಗಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಅಮೆರಿಕಾದಲ್ಲಿನ ಗುಲಾಮಗಿರಿ ಪದ್ಧತಿ, 1857ರ ಹಣಕಾಸು ಮತ್ತು ಆರ್ಥಿಕ ಬಿಕ್ಕಟ್ಟು, ಆ ದೇಶದಲ್ಲಿನ ಅಂತರ್ಯುದ್ಧ, ಜಾಯಿಂಟ್ ಸ್ಟಾಕ್ ಕಂಪನಿಗಳ ಉದಯ ಮುಂತಾದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾ, ಆ ಹೊಸ ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದನ್ನು ಬಹಳ

ಎಚ್ಚರಿಕೆಯಿಂದ ಗಮನಿಸುತ್ತಿದ್ದರು. 19ನೆಯ ಶತಮಾನದ ಮಧ್ಯಭಾಗದ ಕೆಲವು ದಶಕಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಉಂಟಾದ ತೀವ್ರ ವೇಗದ ಕೈಗಾರಿಕೀಕರಣದಿಂದ ಮತ್ತು ಅದೊಂದು ಜಾಗತಿಕವಾಗಿ ಆರ್ಥಿಕ ರಾಜಕೀಯ ಮತ್ತು ಸೇನಾ ಶಕ್ತಿಯಾದಂಥ ಬೆಳವಣಿಗೆಗಳಿಂದ ಅವರು ಪ್ರಭಾವಿತರಾಗಿದ್ದರು. ಒಂದು ಸಣ್ಣ ಕಾಲಾವಧಿಯಲ್ಲಿ ಯಾವುದೇ ನಿಯಂತ್ರಣವಿಲ್ಲದ ಬಂಡವಾಳವಾದವು ಎಂತಹ ಬದಲಾವಣೆಯನ್ನು ತರಬಲ್ಲದು ಎಂಬುದಕ್ಕೆ ಸಂಯುಕ್ತ ಸಂಸ್ಥಾನ ಒಂದು ಪ್ರಭಾವಶಾಲಿ ಉದಾಹರಣೆಯಾಗಿತ್ತು: ಅದು ಉತ್ಪಾದಕ ಶಕ್ತಿಗಳನ್ನು "ಗ್ರೀನ್ ಹೌಸ್" ನಂತೆ (ಹಸಿರು ಮನೆ) " ಅಭಿವೃದ್ಧಿಪಡಿಸಿತು ಎಂದು ಮಾರ್ಕ್ಸ್ ಬರೆದ. ಅದೇ ಸಂದರ್ಭದಲ್ಲಿ ಬಂಡವಾಳವಾದದ ಅಮೆರಿಕನ್ ಮಾದರಿಯು, ಯುರೋಪಿನ ಮಾದರಿಗಿಂತ ಬಹಳ ಭಿನ್ನವಾಗಿತ್ತು. ವಿಶಿಷ್ಟವಾಗಿ ಅದು ರಾಜಕೀಯ ಸ್ವಾತಂತ್ರ್ಯಕ್ಕೆ ಸಮಾನಾಂತರವಾಗಿ ಅಭಿವೃದ್ಧಿ ಹೊಂದಿತು ಮತ್ತು ಆ ಸ್ವಾತಂತ್ರವು ಸಮಾಜದ ಹೆಚ್ಚು ಹೆಚ್ಚು ವಲಯಗಳಿಗೆ ವಿಸ್ತರಿಸಿಕೊಳ್ಳುತ್ತಾ ತುಲನಾತ್ಮಕವಾಗಿ ಉನ್ನತ ಸಾಮಾಜಿಕ ಚಲನಶೀಲತೆಯನ್ನು ಹೊಂದಿತ್ತು. ಯುರೋಪಿನ ರಾಷ್ಟ್ರಗಳಂತಲ್ಲದೆ, ವಿಶೇಷವಾಗಿ ಬ್ರಿಟನ್, ಪ್ರಷ್ಯ, ರಷ್ಯಾ ಮುಂತಾದ ರಾಷ್ಟ್ರಗಳಂತಲ್ಲದೆ ಸಂಯುಕ್ತ ಸಂಸ್ಥಾನಗಳು ಊಳಿಗಮಾನ್ಯ ಪದ್ದತಿಯ ಅವಶೇಷಗಳ ಪ್ರಭಾವಕ್ಕೆ ಒಳಗಾಗಿರಲಿಲ್ಲ. ಹೀಗಾಗಿ ಬಂಡವಾಳವಾದದ ವಿಶಿಷ್ಟ ಲಕ್ಷಣಗಳನ್ನು ಅಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿತ್ತು. ಏಕೆಂದರೆ ಅವು ಊಳಿಗಮಾನ್ಯ ಪದ್ಧತಿಯ ಸೋಂಕಿನಿಂದ ಕಲುಷಿತಗೊಂಡಿರಲಿಲ್ಲ.

ಯುರೋಪು ಖಂಡವು ಚರಿತ್ರೆ ಮತ್ತು ಸಂಪ್ರದಾಯದ ಭಾರದಿಂದ ನರುಳುತ್ತಿದ್ದರೆ, ಸಂಯುಕ್ತ ಸಂಸ್ಥಾನಗಳು ಹೊಚ್ಚಹೊಸದಾಗಿ ಆರಂಭಗೊಂಡವು. ಮಾರ್ಕ್ಸ್ ಮತ್ತು ಏಂಗೆಲ್ಸ್ ಸಂಯುಕ್ತ ಸಂಸ್ಥಾನದಲ್ಲಿನ ಗುಲಾಮಗಿರಿಗೆ ವಿಶೇಷ ಗಮನವನ್ನು ನೀಡಿದರು, ಯೂರೋಪಿನಲ್ಲೆಲ್ಲೂ ಅದಕ್ಕೆ ಸಮಾನಾಂತರ ಉದಾಹರಣೆ ಇರಲಿಲ್ಲ. ಅವರ ಪ್ರಕಾರ ಗುಲಾಮಗಿರಿಯು ಆರಂಭಕಾಲದ ಉತ್ತರ ಅಮೆರಿಕಾದ ಬಂಡವಾಳವಾದದ ಅವಶ್ಯಕ ಭಾಗವಾಗಿತ್ತು ಮತ್ತು ಹತ್ತಿ ಗಿರಣಿಯ ಕಾರ್ಖಾನೆಗಳ ಐಶ್ವರ್ಯಕ್ಕೆ ಅದು ಮುಖ್ಯ ಅಂಶವಾಗಿತ್ತು. ಗುಲಾಮಗಿರಿ ಇಲ್ಲದಿದ್ದರೆ ಅಮೆರಿಕಾದ ಆರ್ಥಿಕತೆ ಅಷ್ಟು ವೇಗವಾಗಿ ಬೆಳೆಯುತ್ತಿರಲಿಲ್ಲ ಎಂದು ಅವರು ನುಡಿದರು. ಗುಲಾಮರ ರಕ್ತ, ಬೆವರು ಮತ್ತು ಕಂಬನಿಗಳು ಆ ಬಂಡವಾಳದ ಅಭಿವೃದ್ಧಿಗೆ ಇಂಧನವಾದವು. ಅದೇನೆ ಇರಲಿ ಅಂತರ್ ಯುದ್ಧವು ದಾಖಲಿಸಿದಂತೆ ಅಮೆರಿಕಾದ ಬಂಡವಾಳವಾದದ ಆರ್ಥಿಕ ಅಭಿವೃದ್ಧಿಯಲ್ಲಿ ಗುಲಾಮಗಿರಿಯು ತನ್ನ ಮುನ್ನಡೆಸುವ ಶಕ್ತಿಯನ್ನು ಕ್ರಮೇಣ ಕಳೆದುಕೊಂಡಿತ್ತು ಎಂಬುದನ್ನು ಅವರು ಮನಗಂಡರು. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿನ ಬೆಳವಣಿಗೆಗಳು ಮತ್ತು ಅವು ಯುರೋಪಿಗಿಂತ ಭಿನ್ನವಾಗಿದ್ದ ರೀತಿಯು ಮಾರ್ಕ್ಸ್ ತನ್ನ ಮೇರುಕೃತಿಯನ್ನು ಮುಗಿಸದೆ ಇದ್ದುದಕ್ಕೆ ಆಳವಾದ ಕಾರಣವಾಗಿದ್ದಿರಬಹುದು.

ನಾವೀಗ, ಬಂಡವಾಳವಾದ ಮತ್ತು ಅದರ ಚಲನೆಯ ನಿಯಮಗಳನ್ನು ವಿಶ್ಲೇಷಿಸಲು ಮಾರ್ಕ್ಸ್ ಉಪಯೋಗಿಸಿದ ಪರಿಕಲ್ಪನೆಗಳತ್ತ ಗಮನ ಹರಿಸೋಣ.

## ಮೌಲ್ಯ ಮತ್ತು ಮಿಗುತಾಯ ಮೌಲ್ಯದ ಸಿದ್ಧಾಂತ

ಯಾವುದಾದರೂ ಎರಡು ಸರಕುಗಳನ್ನು ಒಂದಾನೊಂದು ಅನುಪಾತದಲ್ಲಿ ವಿನಿಮಯ ಮಾಡಿಕೊಂಡಾಗ ಅವು ಯಾವುದೋ ಅಳತೆಯಲ್ಲಿ ಸಮಾನವಾಗಿರಬೇಕು ಎಂಬುದನ್ನು ಮಾರ್ಕ್ಸ್ ಒತ್ತಿ ಹೇಳಿದರು. ಆ ಎರಡಕ್ಕೂ ಸಂಬಂಧಿಸಿದ ಮೂರನೆಯ ಸಾಮಾನ್ಯ ಮಾಧ್ಯಮವು ಆತನ ಪ್ರಕಾರ ಅಮೂರ್ತ ಮಾನವ ಶ್ರಮದ ಉತ್ಪನ್ನಗಳಾಗಿ ಹಂಚಿಕೊಂಡ ಲಕ್ಷಣವನ್ನು ಹೊಂದಿರಲೇಬೇಕು. ಅದರ ಪ್ರಕಾರ ಸರಕನ್ನು ಉತ್ಪಾದಿಸುವಲ್ಲಿ ಅವಶ್ಯಕವಾದ ಶ್ರಮದ ಪರಿಮಾಣದ ಮೂಲಕ ಸರಕಿನ ಮೌಲ್ಯವು ನಿರ್ಣಯವಾಗುತ್ತದೆ. ಅಂದ ಮೇಲೆ ಸರಕುಗಳಲ್ಲಿ ಎಷ್ಟರಮಟ್ಟಿಗೆ ಅಮೂರ್ತ ಶ್ರಮವು ಅಡಕವಾಗಿರುತ್ತದೆಯೋ, ಅದಕ್ಕೆ ಅನುಗುಣವಾಗಿ ಸರಕುಗಳ ವಿನಿಮಯ ಆಗುತ್ತದೆ. ಮೊದಲ ನೋಟಕ್ಕೆ ಈ ವಾದವು ಸರಿ ಎನ್ನಿಸುತ್ತದೆ ಆದರೆ ಅದು ನಿಜವೆಂದು ಸಾಬೀತಾಗುತ್ತದೆಯೇ?

ಸ್ಮಿತ್ ಮತ್ತು ರಿಕಾರ್ಡೊ ಅವರು ವಾದಿಸುವಂತೆ ಪ್ರತಿಯೊಂದು ಉತ್ಪನ್ನವನ್ನು ಮಾಡುವುದಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಅಗತ್ಯವಾಗುವ ಗೋಧಿ ಇದೆ ಎನ್ನುವುದಾದರೆ ಇಂತಹ ಉತ್ಪನ್ನಗಳನ್ನು ಕೂಡ "ಸಾಮಾನ್ಯ ಮೂರನೇ ಒಂದು ಭಾಗ" ಎನ್ನಬಹುದು. ಆದ್ದರಿಂದ ಎಲ್ಲಾ ಸರಕುಗಳನ್ನು ಉತ್ಪಾದಿಸುವಲ್ಲಿ ಅಗತ್ಯವಾದ ಒಳಸುರಿ (ಪ್ರತ್ಯಕ್ಷವಾಗಿ ಪರೋಕ್ಷವಾಗಿ) ಸರಕುಗಳು ಎಷ್ಟಿವೆಯೋ ಅವೆಲ್ಲವೂ ಕೂಡ ಒಂದಕ್ಕೊಂದು ಸಮನಾದಂತೆ, ನಮಗೆ ಅಷ್ಟರಮಟ್ಟಿಗೆ ಹೆಚ್ಚಿನ ಆಯಾಮಗಳು ದೊರಕುತ್ತವೆ.

ಆದರೆ ನಾವು ಇದನ್ನು ಮುಂದುವರಿದು ನೋಡೋಣ. ಹೆಚ್ಚಿನ ವಿಮರ್ಶೆಗೆ ಒಳಪಡಿಸೋಣ. ಮಾರ್ಕ್ಸ್ ನ ಮಾತಿನಲ್ಲಿ ಹೇಳುವುದಾದರೆ, ಒಂದು ಸರಕಿನ ಮೌಲ್ಯವು ಅದರ ಉತ್ಪಾದನೆಯ ಅಂತಿಮ ಹಂತದಲ್ಲಿ ಅದಕ್ಕೆ ಅಗತ್ಯವಾದ 'ಜೀವಂತ' ಶ್ರಮ ಮತ್ತು ಅವುಗಳನ್ನು ಉತ್ಪಾದಿಸಲು ಉಪಯೋಗಿಸಲ್ಪಟ್ಟ ಉತ್ಪಾದನಾ ಸಾಧನಗಳಲ್ಲಿ ಅಡಕವಾಗಿರುವ 'ಮೃತ' ಶ್ರಮ ಅಥವಾ 'ಸ್ಥಿರ ಬಂಡವಾಳ'ವನ್ನು ಸೇರಿಸಿದರೆ ಅದಕ್ಕೆ ಸಮನಾಗುತ್ತದೆ. ಬಂಡವಾಳವಾದದಲ್ಲಿ ಮಾನವ ಶ್ರಮ ಶಕ್ತಿಯು ಒಂದು ಸರಕಾಗುತ್ತದೆ ಮತ್ತು ಇತರ ಸರಕುಗಳಂತೆ, ಅದರ ಮೌಲ್ಯವು ಅದರ ಪುನರುತ್ಪಾದನೆಗೆ ಅಗತ್ಯವಾದ ಸರಕುಗಳ ಮೌಲ್ಯಕ್ಕೆ ಸಮನಾಗುತ್ತದೆ. ಕಾರ್ಮಿಕನೊಬ್ಬನು ದಿನದಲ್ಲಿ 9 ಗಂಟೆಗಳಷ್ಟು ಕೆಲಸ ಮಾಡಿದರೆ ಅವನು ಅದಕ್ಕೆ ಅನುಗುಣವಾಗಿ ಮೌಲ್ಯವನ್ನು ಸೃಷ್ಟಿಸುತ್ತಾನೆ. ಕಾರ್ಮಿಕನೊಬ್ಬನಿಗೆ ದಿನವಹಿ ಸಿಗುವ ವೇತನದಿಂದ ಅವನು ತನಗೆ ಜೀವನೋಪಾಯಕ್ಕಾಗಿ ಬೇಕಾದ

ಆ ದಿನದ ಸಾಧನವನ್ನು ಕೊಂಡುಕೊಳ್ಳಲಾದರೆ ಮತ್ತು ಆ ವೇತನವನ್ನು ಉತ್ಪಾದಿಸಲು ಐದು ಗಂಟೆಗಳು ಬೇಕಾಗಿದ್ದರೆ, ಆಗ ಆ ಐದು ಗಂಟೆಗಳನ್ನು ಮಾರ್ಕ್ಸ್ ಚರ ಬಂಡವಾಳ ಅಥವಾ ಶ್ರಮದ ಮೇಲೆ ವೆಚ್ಚ ಮಾಡಿದ ಬಂಡವಾಳ ಎಂದು ಕರೆಯುತ್ತಾನೆ. ಮತ್ತು ತಾನು ದುಡಿದ ಉಳಿದ ನಾಲ್ಕು ಗಂಟೆಗಳಲ್ಲಿ ಅವನು ಮಿಗುತಾಯ ಮೌಲ್ಯವನ್ನು ಸೃಷ್ಟಿಸಿರುತ್ತಾನೆ. ಆ ದಿನದ ಉತ್ಪನ್ನವನ್ನು ಮಾರಾಟ ಮಾಡಿದಾಗ ಬಂಡವಾಳಗಾರನು ಈ ಮಿಗುತಾಯ ಮೌಲ್ಯವನ್ನು 'ಲಾಭ' ಎಂದು ತನ್ನ ಜೇಬಿಗೆ ಇಳಿಸಿಕೊಂಡಿರುತ್ತಾನೆ.

ಶ್ರಮ ಶಕ್ತಿಯನ್ನು ಕೊಳ್ಳಲು ಉಪಯೋಗಿಸಿದ ಬಂಡವಾಳದ ಈ ಭಾಗವನ್ನು ಮಾರ್ಕ್ಸ್ ಚರ ಬಂಡವಾಳ ಎಂದು ಕರೆಯುವುದೇಕೆಂದರೆ, "ಅದು ಒಂದೆಡೆ ತನ್ನ ಮೌಲ್ಯಕ್ಕೆ ಸಮನಾದುದನ್ನು ಪುನರುತ್ಪಾದನೆ ಮಾಡುತ್ತದೆ ಮತ್ತು ಇನ್ನೊಂದೆಡೆ ಹೆಚ್ಚುವರಿಯಾಗಿ ಮಿಗುತಾಯ ಮೌಲ್ಯವನ್ನು ಸೃಷ್ಟಿಸುತ್ತದೆ". ಕಾರ್ಮಿಕನು ಒಂದು ದಿನದಲ್ಲಿ ಮಾಡಿದ ಒಂಬತ್ತು ಗಂಟೆಗಳ ಶ್ರಮದಲ್ಲಿ 20 ಗಂಟೆಗಳ ಮೌಲ್ಯಕ್ಕೆ ಸಮನಾದ ಉತ್ಪಾದನಾ ಸಾಧನಗಳನ್ನು ಉಪಯೋಗಿಸಲಾಗಿದ್ದರೆ ಅಥವಾ ಉತ್ಪಾದಕವಾಗಿ ಬಳಸಿಕೊಳ್ಳಲಾಗಿದ್ದರೆ ಆಗ ಆ ದಿನದ ಒಟ್ಟಾರೆ ಉತ್ಪಾದನೆಯ ಮೌಲ್ಯವು 29 ಗಂಟೆಗಳಾಗುತ್ತವೆ. ಗಳಿಸಿಕೊಂಡ ಲಾಭದ ದರವನ್ನು ನಿಗದಿಪಡಿಸಬೇಕೆಂದರೆ ಆಗ ಮಿಗುತಾಯ ಮೌಲ್ಯವನ್ನು ವಿನಿಯೋಗಿಸಿದ ಇಡೀ ಬಂಡವಾಳಕ್ಕೆ ಅನ್ವಯಿಸಬೇಕು (ಕಾರ್ಮಿಕನ ವೇತನವು ಐದು ಗಂಟೆಗಳ ಮೌಲ್ಯವನ್ನು ಮತ್ತು ಸ್ಥಿರಬಂಡವಾಳವು 20 ಗಂಟೆಗಳ ಮೌಲ್ಯವನ್ನು ಪ್ರತಿನಿಧಿಸುವುದರಿಂದ ಒಟ್ಟಾರೆ 25 ಗಂಟೆಗಳಾಗುತ್ತವೆ). ಎಂದರೆ ಅದು ಈ ಉದಾಹರಣೆಯಲ್ಲಿ 4/ 25 ಅಥವಾ ಶೇಕಡಾ 16 ಆಗುತ್ತದೆ.

ಮಾರ್ಕ್ಸ್ ನು ಮಿಗುತಾಯ ಮೌಲ್ಯ ಮತ್ತು ಚರ ಬಂಡವಾಳ ಇವುಗಳ ನಡುವಿನ ಅನುಪಾತವನ್ನು "ಮಿಗುತಾಯ ಮೌಲ್ಯದ ದರ" ಎಂದು ಕರೆಯುತ್ತಾನೆ. ದುಡಿಮೆಯ ದಿನ ಮತ್ತು ದುಡಿಮೆಯ ತೀವ್ರತೆ ಸಮನಾಗಿದ್ದಾಗ ಅದು ಆರ್ಥಿಕತೆಯ ಎಲ್ಲ ಶಾಖೆಗಳಲ್ಲೂ ಸಹ ಏಕರೂಪವಾಗಿರುವಂತೆ ಕಂಡುಬರುತ್ತದೆ. ಆದರೆ ಬಂಡವಾಳದ ಸಾವಯವ ಸಂಯೋಜನೆಯು - ಜೀವಂತ ಮತ್ತು ಮೃತ ಶ್ರಮಗಳ ನಡುವಿನ ಅನುಪಾತವು- ಹಾಗಿರುವುದಿಲ್ಲ. ತಾಂತ್ರಿಕ ಕಾರಣಗಳಿಂದಾಗಿ ಆರ್ಥಿಕತೆಯ ವಿಭಿನ್ನ ಶಾಖೆಗಳಲ್ಲಿ ಇದು ಹೆಚ್ಚು ಕಡಿಮೆಯಾಗುತ್ತದೆ. ಒಬ್ಬ ಕ್ಷೌರಿಕನ ಅಂಗಡಿಯಲ್ಲಿ ಉದಾಹರಣೆಗೆ, ಈ ಸಾವಯವ ಸಂಯೋಜನೆಯು ಚಿಕ್ಕದಾಗಿರುತ್ತದೆ; ಆದರೆ ಒಂದು ಅನೇಕ ಉತ್ಪಾದನಾ ಸಾಧನಗಳನ್ನು ಉಪಯೋಗಿಸಿಕೊಂಡು ನಡೆಯುವ ಅಣು ಸ್ಥಾವರದಂತಹ ಕ್ಷೇತ್ರದಲ್ಲಿ ಇದು ವಿಪರೀತ ಹೆಚ್ಚಿರುತ್ತದೆ. ಆದರೆ ಮಿಗುತಾಯ ಮೌಲ್ಯವು ಚರ ಬಂಡವಾಳಕ್ಕೆ ಅನುಸಾರವಾದ ಪ್ರಮಾಣದಲ್ಲಿ ಸೃಷ್ಟಿಯಾಗುವುದರಿಂದ ಮತ್ತು ಒಟ್ಟಾರೆ ಬಂಡವಾಳಕ್ಕೆ (ಎಂದರೆ ಚರ ಹಾಗೂ ಅದರೊಟ್ಟಿಗೆ ಸ್ಥಿರ

ಬಂಡವಾಳ ಇದಕ್ಕೆ) ಅನುಸಾರವಾದ ಪ್ರಮಾಣದಲ್ಲಿ ಆಗದಿರುವುದರಿಂದ, ಈ ಕೆಳಗಿನ ಸಮಸ್ಯೆಯು ತಲೆದೋರುತ್ತದೆ: ಶ್ರಮದ ಮೌಲ್ಯಕ್ಕೆ ಅನುಗುಣವಾಗಿ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವುದಾದರೆ ಆಗ ಬಂಡವಾಳದ ಹೆಚ್ಚಾದ ಸಾವಯವ ಸಂಯೋಜನೆ ಇರುವ ಶಾಖೆಗಳು ತುಲನೆಯಲ್ಲಿ ಕಡಿಮೆ ಸಾವಯುವ ಸಂಯೋಜನೆಯ ಬಂಡವಾಳವನ್ನು ಹೊಂದಿರುವ ಶಾಖೆಗಳಿಗಿಂತ ಕಡಿಮೆ ಲಾಭವನ್ನು ಪಡೆಯುತ್ತವೆ. ಆದರೆ ಮಾರ್ಕ್ಸ್ ಇದು ಲಾಭದ ದರಗಳನ್ನು ಸಮನಾಗಿಸಿಬಿಡುವುದರಿಂದ ಸ್ಪರ್ಧೆಗೆ ಹೊಂದಿಕೆಯಾಗುವುದಿಲ್ಲ ಎಂದು ಒತ್ತಿ ಹೇಳಿದನು. ಹಾಗಾಗಿ ಸರಕುಗಳನ್ನು ಶ್ರಮದ ಮೌಲ್ಯಕ್ಕೆ ಅನುಗುಣವಾಗಿ ವಿನಿಮಯ ಮಾಡಿಕೊಳ್ಳಲಾಗುವುದಿಲ್ಲ.

ಈ ಸಮಸ್ಯೆಗೆ ಸಂಬಂಧಿಸಿದಂತೆ ಯೂಜೆನ್ ವಾನ್ ಬೋಂ - ಬಾವೆರ್ಕ್( 1851– 1914) ಎಂಬುವರು ಮಾರ್ಕ್ಸ್ ಇದನ್ನು ಗಮನಿಸಿಲ್ಲ ಎಂದು ಟೀಕೆ ಮಾಡಿದನು , ಆದರೆ ಇದರ ಬಗ್ಗೆ ಮಾರ್ಕ್ಸ್ ನಿಗೆ ಸಂಪೂರ್ಣವಾಗಿ ಅರಿವಿತ್ತು. ಆದ್ದರಿಂದ ಅವನು ಸಮಾನ ಲಾಭದ ದರಗಳ ಮಾನದಂಡವನ್ನು ತೃಪ್ತಿಪಡಿಸುವಂತಹ ಉತ್ಪಾದನಾ ಬೆಲೆಗಳ ದೃಷ್ಟಿಯಿಂದ ಮೌಲ್ಯಗಳನ್ನು ಮತ್ತೆ ಲೆಕ್ಕ ಹಾಕುವುದನ್ನು ಪ್ರತಿಪಾದಿಸಿದನು. ಮಾರ್ಕ್ಸ್ ನು ಈ ರೂಪಾಂತರದ ಸಮಸ್ಯೆಯನ್ನು *ಕ್ಯಾಪಿಟಲ್*ನ ಮೂರನೇ ಸಂಪುಟದಲ್ಲಿ ಚರ್ಚಿಸಿದನು. ಇಲ್ಲಿಯವರೆಗೂ ಚರ್ಚಿಸಲಾದ "ಮೌಲ್ಯದ ನಿಯಮ"ವು ಒಟ್ಟಾರೆ ಆರ್ಥಿಕತೆಯ ಮಟ್ಟದಲ್ಲಿ ಸಮ್ಮತವಾಗಿರುತ್ತದೆ ಎಂಬ ಅಂಗೀಕೃತ ಅಭಿಪ್ರಾಯದ ಮೇಲೆ ಅವನು ಕೆಲಸ ಮಾಡಿದನು: ಒಂದು ವರ್ಷದಲ್ಲಿ ಕೆಲಸ ಮಾಡಿದ ಎಲ್ಲ ಗಂಟೆಗಳು ಎಂದರೆ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಶ್ರಮ ಮೌಲ್ಯವನ್ನು P ಎಂದು ಕರೆಯೋಣ. ಇದು, ಉಪಯೋಗಿಸಲ್ಪಟ್ಟ ಒಟ್ಟಾರೆ ಸ್ಥಿರ ಬಂಡವಾಳ (ಇದನ್ನು C ಎಂದು ಕರೆಯುವ), ಉಪಯೋಗಿಸಲ್ಪಟ್ಟ ಎಲ್ಲಾ ಚರ ಬಂಡವಾಳ (ಇದನ್ನು V ಎಂದು ಕರೆಯುವ) ಮತ್ತು ಸೃಷ್ಟಿಯಾದ ಎಲ್ಲಾ ಮಿಗುತಾಯ ಮೌಲ್ಯ(ಇದನ್ನು S ಎಂದು ಕರೆಯೋಣ) ಇವುಗಳ ಮೊತ್ತಕ್ಕೆ ಸಮನಾಗಿರುತ್ತದೆ. ಇದನ್ನು ಈ ಸೂತ್ರದ ಮೂಲಕ ಸಂಕೇತಿಸಬಹುದು, P= C+V+S. ಇದು ಆರ್ಥಿಕ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಶ್ರಮದ ಸಂರಕ್ಷಣೆಯ (ಕನ್ಸರ್ವೇಷನ್) ಆರ್ಥಿಕ ನಿಯಮದ ಒಂದು ರೂಪವನ್ನು ಮತ್ತು ಅದರ ಮೌಲ್ಯ ಸೃಷ್ಟಿಯ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ. ಈ ಮೂಲಕ ಮಾರ್ಕ್ಸ್ ನುಒಂದು ವರ್ಷದಲ್ಲಿ ಗಳಿಸಲಾಗುವ ಎಲ್ಲ ಲಾಭಗಳು ಸಹ ಒಟ್ಟಾರೆ ಸೃಷ್ಟಿಯಾಗುವ ಮಿಗುತಾಯ ಮೌಲ್ಯಗಳಿಗೆ ಸಮನಾಗಿರುತ್ತವೆ ಮತ್ತು ಅದೇ ಸಮಯದಲ್ಲಿ ಎಲ್ಲ ಉತ್ಪಾದನೆಯ ದರಗಳ ಮೊತ್ತವು ಗೆ ಸಂಬಂಧಿಸಿದ ಎಲ್ಲ ಮೌಲ್ಯಗಳ ಮೊತ್ತಕ್ಕೆ ಸಮನಾಗಿರುತ್ತದೆ ಎಂದು ಭಾವಿಸಿದನುnu. ಹೀಗಾಗಿ ಅವನು ಲಾಭದ ಸಾಮಾನ್ಯ ದರ ಅಥವಾ 'ಪಿ' ಎಂಬುದು, ಎಸ್ ಮತ್ತು ಸ್ಥಿರ ಬಂಡವಾಳ 'ಸಿ' ಗೆ ಚರ ಬಂಡವಾಳ 'ವಿ' ಅನ್ನು ಕೂಡಿಸಿದರೆ ಆಗುವ ಮೊತ್ತ ಇವುಗಳ ನಡುವಿನ ಅನುಪಾತಕ್ಕೆ ಸಮವಾಗಿ ಇರುತ್ತದೆ ಎಂದು ಭಾವಿಸಿದನು; ವಿ: ಪಿ = ಎಸ್/(ಸಿ+ವಿ).

ಅದೇನೆ ಇರಲಿ ಈ ಪರಿಕಲ್ಪನೆಯು ಸೂಕ್ಷ್ಮ ಪರಿಶೀಲಿಸಿದಾಗ  ನಿಲ್ಲುವುದಿಲ್ಲ. ಮಾರ್ಕ್ಸ್, ಎರಡು ಸರಕುಗಳ ಬೆಲೆಯ ಅನುಪಾತವು, ಶ್ರಮ ಮೌಲ್ಯದ ಅನುಪಾತಕ್ಕಿಂತ ಭಿನ್ನವಾಗಬಹುದು ಮತ್ತು ಸಾಮಾನ್ಯವಾಗಿ ಆಗುತ್ತದೆ ಎಂಬುದನ್ನು ಒಪ್ಪಿಕೊಂಡ, ಆದರೆ ಒಂದೊಂದೇ ಸರಕುಗಳ ಮಧ್ಯದಲ್ಲಿನ ಅನುಪಾತಕ್ಕೆ ಅನ್ವಯಿಸುವ ಸಂಗತಿಯು ಸರಕುಗಳನ್ನು ಒಟ್ಟಿಗೆ ಕೂಡಿಸಿದಾಗ ಅವುಗಳ ಅನುಪಾತಕ್ಕೂ ಅನ್ವಯಿಸುತ್ತದೆ. ಭೌತಿಕ ಸ್ವರೂಪದಲ್ಲಿ ಗ್ರಹಿಸಿಕೊಂಡ ಲಾಭದ ದರವು, ಒಟ್ಟಾರೆ ಆರ್ಥಿಕತೆಯ ಹೆಚ್ಚುವರಿ ಉತ್ಪನ್ನ ಮತ್ತು ಒಟ್ಟಾರೆ ಆರ್ಥಿಕತೆಯ ಬಂಡವಾಳ ಇವುಗಳ ನಡುವಿನ ಅನುಪಾತವಲ್ಲದೆ ಬೇರೇನೂ ಆಗಿರುವುದಿಲ್ಲ ಅಂದದರೆ ಎರಡು ಸಂಯೋಜಿತ ಸರಕುಗಳ  ನಡುವಿನ ಅನುಪಾತ ಆಗಿರುತ್ತದೆ. ಸಾಮಾನ್ಯವಾಗಿ ಸ್ಪರ್ಧಾತ್ಮಕ ದರಗಳ ಸ್ವರೂಪದಲ್ಲಿ ಅಭಿವ್ಯಕ್ತವಾದ ಅನುಪಾತವು, ಶ್ರಮದ ಮೌಲ್ಯಗಳ ಸ್ವರೂಪದಲ್ಲಿ ಅಭಿವ್ಯಕ್ತವಾದ ಅನುಪಾತಕ್ಕಿಂತ  ಭಿನ್ನವಾಗುತ್ತದೆ ಎಂದು ಅಂದುಕೊಳ್ಳಲು ಯಾವುದೇ ತಾರ್ಕಿಕ ಆಧಾರವಿಲ್ಲ. ಹೀಗಾಗಿ ಶ್ರಮದ ಮೌಲ್ಯಗಳು ಉತ್ಪಾದನೆಯ ಬೆಲೆಗಳಾಗಿ ಪರಿವರ್ತಿತವಾಗುತ್ತವೆ ಎಂಬ ಮಾರ್ಕ್ಸ್ ನ ಪರಿಕಲ್ಪನೆಯನ್ನು ಸಮರ್ಥಿಸುವುದು -ಕೆಲವು ವಿಶಿಷ್ಟ ಪ್ರಕರಣಗಳಲ್ಲಲ್ಲದೆ  ಉಳಿದೆಡೆ- ಸಾಧ್ಯವಿಲ್ಲ. ಅಂತಹ ವಿಶಿಷ್ಟ ಪ್ರಕರಣವೆಂದರೆ ಬಂಡವಾಳದ ಸಾವಯವ ಸಂಯೋಜನೆಗಳು ಆರ್ಥಿಕತೆಯ ಎಲ್ಲೆಡೆ ಒಂದೇ ರೀತಿಯಲ್ಲಿ ಇರುತ್ತವೆ ಎನ್ನುವಂತಹ ಶುದ್ಧ ಊಹಾತ್ಮಕ ಪ್ರಕರಣಗಳು. ಲಾಭದ ಸಾಮಾನ್ಯ ದರಗಳು ಮತ್ತು ಉತ್ಪಾದನೆಯ ಬೆಲೆಗಳು ಇವುಗಳನ್ನು ನಿರ್ಣಯಿಸಲು ಅವರು ಮುಂದಿಟ್ಟಿರುವ ಪ್ರತಿಪಾದನೆಗಳು ಹೆಚ್ಚೆಂದರೆ ಸಮಸ್ಯೆಗೆ ಒಂದು ಅಂದಾಜು ಪರಿಹಾರವನ್ನು ಸೂಚಿಸಬಹುದಷ್ಟೇ.

## ಲಾಭದ ದರಗಳು ಕುಸಿಯುವ ಪ್ರವೃತ್ತಿಯ ಕುರಿತಾದ ನಿಯಮ

'ಚಾರಿತ್ರಿಕ ದೃಷ್ಟಿಕೋನದಿಂದ ಪರಿಗಣಿಸಿದಾಗ' ಈ 'ನಿಯಮ'ವು ಅತ್ಯಂತ ಮುಖ್ಯವಾದ ನಿಯಮ ಎಂದು ಮಾರ್ಕ್ಸ್ ಅಭಿಪ್ರಾಯಪಟ್ಟ. ಏಕೆಂದರೆ ಇದು ಬಂಡವಾಳಶಾಹಿ ಉತ್ಪಾದನಾ ವಿಧಾನದ ಕ್ಷಣಿಕತೆಯನ್ನು ತೋರಿಸುತ್ತದೆ. ಲಾಭದ ಧರಗಳು ಕುಸಿಯುವುದಕ್ಕೆ ಕಾರಣವೆಂದರೆ ಕೃಷಿಯಲ್ಲಿ ಲಾಭದ ಇಳಿಕೆಯಾಗುತ್ತಿರುವುದು ಎಂಬ ರಿಕಾರ್ಡೋ ಅವರ ವಿವರಣೆಯನ್ನು ಮಾರ್ಕ್ಸ್ ತಿರಸ್ಕರಿಸಿದ. ಮತ್ತು ರಿಕಾರ್ಡೋ, "ಅರ್ಥಶಾಸ್ತ್ರದಿಂದ ಪಲಾಯನ ಮಾಡಿ ಸಾವಯವ ರಸಾಯನ ಶಾಸ್ತ್ರದಲ್ಲಿ ಆಶ್ರಯವನ್ನು ಪಡೆಯುತ್ತಿದ್ದಾನೆ " ಎಂದು ತಮಾಷೆ ಮಾಡಿದನು. ಇದಕ್ಕೆ ಪ್ರತಿಯಾಗಿ  "ಶ್ರಮದ ಉತ್ಪಾದಕ ಶಕ್ತಿಯು ಕಡಿಮೆಯಾಗುವುದರಿಂದ ಲಾಭದ ದರವು ಕುಸಿಯುವುದಿಲ್ಲ, ಬದಲಿಗೆ ಹಾಗಾಗುವುದು ಅದರ ಉತ್ಪಾದಕ ಶಕ್ತಿ ಹೆಚ್ಚಾಗುವುದರಿಂದ" ಎಂದು ಮಾರ್ಕ್ಸ್ ವಾದಿಸಿದ. ತಂತ್ರಜ್ಞಾನ ಪ್ರಗತಿ ಸಾಧಿಸಿದರೂ ಸಹ ಹಾಗಾಗುತ್ತದೆ ಎಂದು ಮಾರ್ಕ್ಸ್ ಹೇಳಿದರೆ, ರಿಕಾರ್ಡೋ ತಾಂತ್ರಿಕ ಪ್ರಗತಿಯು ಕುಸಿತವನ್ನು

ತಡೆಗಟ್ಟುತ್ತದೆ ಎಂದನು! ಹೀಗೆನ್ನುವುದಾದರೆ ಇದಕ್ಕೆ ವಿರುದ್ಧವಾಗಿ ಉತ್ಪಾದಕ ಶಕ್ತಿಯು ಕುಸಿದಾಗ ಲಾಭಗಳು ಹೆಚ್ಚುತ್ತವೆ ಎಂದು ಮಾರ್ಕ್ಸ್ ನಂಬಿದ್ದನು ಎಂದು ನಾವು ಭಾವಿಸಬಹುದೇ?

ಮಾರ್ಕ್ಸ್ ನ ನಿರೀಕ್ಷೆ ಬಹಳ ಹೆಚ್ಚಿತ್ತು. ಬಂಡವಾಳಗಾರರು ತಮ್ಮ ಪ್ರತಿಸ್ಪರ್ಧಿ ಸೋದರರೊಂದಿಗಿನ ಸ್ಪರ್ಧಾತ್ಮಕ ಹೋರಾಟದಲ್ಲಿ ಬದುಕಿ ಉಳಿಯಬೇಕೆಂದರೆ ಪ್ರತಿಯೊಬ್ಬರೂ ಬಂಡವಾಳವನ್ನು ಸಂಗ್ರಹಿಸಿಕೊಳ್ಳಬೇಕು ಮತ್ತು ಹೊಸ ಉತ್ಪನ್ನಗಳನ್ನು ಸೃಷ್ಟಿಸಲು ಅಥವಾ ಹಳೆಯ ಉತ್ಪನ್ನಗಳನ್ನು ಕಡಿಮೆ ಖರ್ಚಿನಲ್ಲಿ ಉತ್ಪಾದಿಸಲು ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಬೇಕು. ಇದರಿಂದ ಬೇರೆ ಬೇರೆ ಸರಕುಗಳ ಮೌಲ್ಯಗಳು ಕುಸಿಯುತ್ತವೆ ಮತ್ತು ಅದರೊಂದಿಗೆ ಅವುಗಳ ಉತ್ಪಾದನಾ ಬೆಲೆಗಳು ಸಹ. ವಿಭಿನ್ನ ಸರಕುಗಳನ್ನು ಉತ್ಪಾದಿಸಲು ಅಗತ್ಯವಾಗುವ ಶ್ರಮವೂ ಕಡಿಮೆಯಾಗುತ್ತಾ ಹೋಗುತ್ತದೆ. ಬಂಡವಾಳವಾದದ ಒಳಗಿನ ತಾಂತ್ರಿಕ ಪ್ರಗತಿಯಲ್ಲಿ ಬಂಡವಾಳದ ಸಾವಯವ ಸಂಯೋಜನೆಯು ಹೆಚ್ಚಾಗುವ ಲಕ್ಷಣವು ಪ್ರಧಾನವಾಗಿರುತ್ತದೆ ಎಂಬುದನ್ನು ಮಾರ್ಕ್ಸ್ ಗಮನಿಸಿದ: ಪ್ರತಿ ಕಾರ್ಮಿಕನ ಬದಲಿಗೆ ಹೆಚ್ಚು ಹೆಚ್ಚಾಗಿ ಕಾರ್ಖಾನೆಯ ಕಟ್ಟಡ ಮತ್ತು ಸಲಕರಣೆಗಳು ( ಉಪಕರಣಗಳು, ಯಂತ್ರಗಳು ಇತ್ಯಾದಿ) ಇವುಗಳನ್ನು ಹೆಚ್ಚಿಸಲಾಗುತ್ತಾ ಹೋಗುತ್ತದೆ- ಉತ್ಪಾದನಾ ಪ್ರಕ್ರಿಯೆಯು ಹೆಚ್ಚು ಹೆಚ್ಚು ಯಂತ್ರೀಕರಣಗೊಳ್ಳುತ್ತದೆ. ಕಾರ್ಮಿಕರ ಸ್ಥಾನವನ್ನು ಯಂತ್ರಗಳು ಅಕ್ರಮಿಸಿಕೊಳ್ಳುತ್ತಾ " ನಿರುದ್ಯೋಗಿಗಳ ಕೈಗಾರಿಕಾ ಮೀಸಲು ಸೈನ್ಯ" ಹುಟ್ಟಿಕೊಳ್ಳುತ್ತದೆ. ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅಡ್ಡಿಯಾಗುವುದು ಈ ಮೀಸಲು ಸೈನ್ಯ ಮತ್ತು ಇದರಿಂದಾಗಿ ನಾವು ಈಗಾಗಲೇ ಗಮನಿಸಿರುವಂತೆ ಕಾರ್ಮಿಕನೊಬ್ಬನ ಜೀವನೋಪಾಯದ ಅವಶ್ಯಕತೆಗಳನ್ನು ಉತ್ಪಾದಿಸಲು ಬೇಕಾದ ಕೆಲಸದ ದಿನವೂ ಉದ್ದವಾಗುತ್ತಾ ಹೋಗುತ್ತದೆ. ಇದರಿಂದಾಗಿಯೇ ಮಿಗುತಾಯ ಮೌಲ್ಯ ಮತ್ತು ಲಾಭಗಳು ಅಸ್ತಿತ್ವದಲ್ಲಿವೆ. ಆದರೆ ತಂತ್ರಜ್ಞಾನದ ಪ್ರಗತಿಯಿಂದಾಗಿ ಸ್ಥಿರ ಬಂಡವಾಳಕ್ಕೆ ಹೋಲಿಸಿದಂತೆ ನೇರ ಶ್ರಮವು ಕಡಿಮೆಯಾಗುತ್ತಿದ್ದು ಸಾಪೇಕ್ಷವಾಗಿ ಕಡಿಮೆ ಮತ್ತು ಕಡಿಮೆ ಮಿಗುತಾಯ ಮೌಲ್ಯವನ್ನು ಸೃಷ್ಟಿಸಲಾಗುತ್ತದೆ. ಇದರ ಅರ್ಥವೇನೆಂದರೆ ನಾವು ವಾದಕ್ಕೆಂದು ವೇತನವನ್ನು ಸೊನ್ನೆ ಎಂದು ಭಾವಿಸಿದರೆ, ಲಾಭದ ಗರಿಷ್ಠ ದರಗಳು ಕುಸಿಯುತ್ತವೆ. ಆದರೆ ಲಾಭದ ಗರಿಷ್ಠ ದರಗಳು ಕುಸಿಯುತ್ತಾ ವಾಸ್ತವ ಲಾಭದ ದರಗಳಿಗೆ ಅವಕಾಶ ಕಡಿಮೆಯಾಗುತ್ತಾ ಹೋಗಿ ಅವು ಕೂಡ ಅಂತಿಮವಾಗಿ ಕುಸಿಯುವ ಒತ್ತಾಯಕ್ಕೆ ಒಳಪಡುತ್ತವೆ ಎಂದ ಮಾರ್ಕ್ಸ್.

ಮಾರ್ಕ್ಸ್ ನ ತರ್ಕವು ಒಪ್ಪಿಗೆಯಾಗುತ್ತದೆಯೇ? ಅವನು ಊಹಿಸಿಕೊಂಡಂತೆ ಬಂಡವಾಳವಾದದಲ್ಲಿ ಸಾವಯವ ಸಂಯೋಜನೆಯು ಯಾವಾಗಲೂ ಹೆಚ್ಚುತ್ತದೆ ಮತ್ತು ಅದರಿಂದಾಗಿ ಲಾಭದ ಗರಿಷ್ಠ ದರವು ಯಾವಾಗಲೂ ಕೆಳಗೆ ಬೀಳುವ ಪ್ರವೃತ್ತಿಯನ್ನು ಹೊಂದಿರುತ್ತದೆ ಎಂಬುದು ಸರಿಯೆಂದು ಭಾವಿಸೋಣ. ಹಾಗಿದ್ದರೆ ಬಂಡವಾಳದ ಸಾವಯವ ಸಂಯೋಜನೆಯು ಅನಂತವನ್ನು ಮುಟ್ಟುವಂತಿದ್ದರೆ ಆಗ ಲಾಭದ

ಗರಿಷ್ಠ ದರವು ಅದಕ್ಕೆ ಸಂಬಂಧಿಸಿದಂತೆ ಶೂನ್ಯವಾಗುತ್ತದೆಯೇ? ಆದರೆ ಇದರ ಬದಲಿಗೆ ಲಾಭದ ಗರಿಷ್ಠ ದರವು ಒಂದು ಧನಾತ್ಮಕವಾದ ಕೆಳಗಿನ ಸೀಮಾ ರೇಖೆಯನ್ನು ಮಾತ್ರ ಮುಟ್ಟುವಂತಿದ್ದರೆ ಆಗ ಲಾಭದ ವಾಸ್ತವಿಕ ದರವು ಕಾಲ ಸರಿದಂತೆ ಕುಸಿಯುತ್ತಲೇ ಹೋಗಬೇಕು ಎಂದಿಲ್ಲ, ಮತ್ತು ಬಂಡವಾಳದ ಸಾವಯವ ಸಂಯೋಜನೆಯು ಸದಾಕಾಲವೂ ಹೆಚ್ಚುತ್ತಲೇ ಇರುತ್ತದೆ ಎಂದು ಭಾವಿಸಲು ಸೂಕ್ತ ಕಾರಣವಿದೆಯೇ? ಬಂಡವಾಳಗಾರರು ಉತ್ಪಾದನೆಯ ಹೊಸ ವಿಧಾನಗಳನ್ನು ಪರಿಚಯಿಸುತ್ತಾರೆ ಮತ್ತು ಅದರಿಂದಾಗಿ ತಾಂತ್ರಿಕ ಪ್ರಗತಿಯನ್ನು ಸಾಧಿಸುತ್ತಾರೆ. ಏಕೆಂದರೆ ಇವೆಲ್ಲವೂ ಶ್ರಮದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಆದರೆ ಶ್ರಮದ ಉತ್ಪಾದನಾ ಸಾಮರ್ಥ್ಯ ಹೆಚ್ಚಿದಂತೆ ಅದು ಚರ ಬಂಡವಾಳದ ಅಂಶವನ್ನು ಎಂದರೆ ಕಾರ್ಮಿಕರ ಜೀವನಾವಶ್ಯಕತೆಯ ಸಾಧನಗಳನ್ನು ಅಗ್ಗವಾಗಿಸುತ್ತದೆ ಮತ್ತು ಸ್ಥಿರ ಬಂಡವಾಳ ಅಥವಾ ಉತ್ಪಾದನಾ ಸಾಧನಗಳನ್ನು ಸಹ ಅಗ್ಗವಾಗಿಸುತ್ತದೆ: ಬೇರೆ ಬೇರೆ ರೀತಿಯ ಸರಕುಗಳನ್ನು ಉತ್ಪಾದಿಸಲು ಅಗತ್ಯವಿರುವ ಶ್ರಮವು ಕಡಿಮೆಯಾಗುತ್ತಾ ಹೋಗುತ್ತದೆ. ಇದರ ಅರ್ಥವೇನೆಂದರೆ ಒಂದು ನಿರ್ದಿಷ್ಟ ನೈಜವೇತನಕ್ಕೆ ದಿನವೊಂದರ ಮಟ್ಟಿಗೆ ಕಾರ್ಮಿಕನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಬೇಕಾಗುವ ಚರ ಬಂಡವಾಳವು ಕಡಿಮೆ, ಕಡಿಮೆಯಾಗುತ್ತಾ ಹೋಗುತ್ತದೆ. ಹೀಗಾಗಿ ಒಂದು ಕೆಲಸದ ದಿನದಲ್ಲಿ ಮಿಗುತಾಯ ಮೌಲ್ಯವು ಅವಶ್ಯಕವಾಗಿಯೂ ಹೆಚ್ಚುತ್ತದೆ ಮತ್ತು ಇದರೊಂದಿಗೆ ಮಿಗುತಾಯ ಮೌಲ್ಯದ ದರವೂ ಸಹ. ಇನ್ನೊಂದೆಡೆ ಶಾಶ್ವತ ಬಂಡವಾಳದ ಭಾಗಾಂಶಗಳು ಅಗ್ಗವಾಗುವುದರಿಂದ ಸ್ಥಿರ ಬಂಡವಾಳದ ಮೌಲ್ಯವು ಹೆಚ್ಚುವುದಿಲ್ಲ, ಅದರ ಭೌತಿಕ ಪರಿಮಾಣವು ಯಾವ ವೇಗದಲ್ಲಿ ಹೆಚ್ಚುತ್ತದೆಯೋ ಆ ಮಟ್ಟಿಗಂತೂ ಹೆಚ್ಚುವುದಿಲ್ಲ. ಹೀಗಾಗಿ ಮಾರ್ಕ್ಸ್ ನ ಪ್ರತಿಪಾದನೆಯ ಪ್ರಕಾರ 'ಎಸ್' ಹೆಚ್ಚುತ್ತಿರುತ್ತದೆ ಮತ್ತು 'ವಿ' ಬೀಳುತ್ತಿರುತ್ತದೆ ಹಾಗೂ 'ಸಿ' ನ ಕುರಿತು ನಾವು ಖಚಿತವಾಗಿ ಏನನ್ನು ಹೇಳಲೂ ಸಾಧ್ಯವಿಲ್ಲ. ಹೀಗಾದಲ್ಲಿ ಕಾಲಕ್ರಮೇಣ ಎಸ್/ ( ಸಿ + ವಿ) ನ ಚಲನೆಯು ಏನಾಗುತ್ತದೆ? ಹೆಚ್ಚೇನೂ ಆಗುವುದಿಲ್ಲ. ಒಂದು ನಿರ್ದಿಷ್ಟ ವೇತನ ದರಕ್ಕೆ ಸಂಬಂಧಿಸಿದಂತೆ ಲಾಭದ ದರವು ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಬಹುದೆಂದು ಯೋಚಿಸಲು ಸಾಧ್ಯ.

ಅದೇನೇ ಇರಲಿ ಮಾರ್ಕ್ಸ್ ನು ಲಾಭದ ದರ ಕುಸಿತದ ನಿಯಮಕ್ಕೆ ನಿರ್ಣಾಯಕವಾದ ಪುರಾವೆಯನ್ನು ಒದಗಿಸುವುದರಲ್ಲಿ ಯಶಸ್ವಿಯಾಗಲಿಲ್ಲ. ರಿಕಾರ್ಡೋ ಸಹ ಮಾರ್ಕ್ಸ್ ಅವನಂತೆಯೇ, ಉತ್ಪನ್ನದ ಪ್ರತಿಯೊಂದು ಘಟಕಕ್ಕೆ ಸಂಬಂಧಿಸಿದಂತೆ ಉತ್ಪಾದನೆಯ ವೆಚ್ಚವು ಕಡಿಮೆಯಾಗುವಂತಿದ್ದರೆ ವೆಚ್ಚ ಕಡಿತ ಮಾಡಬೇಕು ಎನ್ನುವ ಬಂಡವಾಳಗಾರರು ಉತ್ಪಾದನೆಯ ಹೊಸ ವಿಧಾನವನ್ನು ಅಳವಡಿಸಿಕೊಳ್ಳುತ್ತಾನೆ ಎಂದು ವಾದಿಸಿದ್ದನು. ಆದರೆ ಮಾರ್ಕ್ಸ್ ನಂತೆ ಅಲ್ಲದೆ ರಿಕಾರ್ಡೋ, ಒಂದು ನಿರ್ದಿಷ್ಟ ಮತ್ತು ಬದಲಾಗದ ನೈಜ ವೇತನದಲ್ಲಿ ಲಾಭವು ಕುಸಿಯುವುದಿಲ್ಲ, ಬದಲಿಗೆ ಅದು ಹೆಚ್ಚುತ್ತದೆ ಅಥವಾ ಇದ್ದ ಹಾಗೆಯೇ ಉಳಿಯುತ್ತದೆ ಎಂದು ವಾದಿಸಿದ್ದನು. ಹೊಸದಾದ

ವಿಧಾನದಿಂದ ನೇರವಾಗಿ ಅಥವಾ ಪರೋಕ್ಷವಾಗಿ ವೇತನದ ವಸ್ತುಗಳ ಉತ್ಪಾದನೆಯು ಅಗ್ಗವಾದರೆ ಆಗ ಲಾಭದ ದರಗಳು ಹೆಚ್ಚುತ್ತವೆ; ಹೊಸ ವಿಧಾನಗಳು ಬೇರೆ ಉತ್ಪನ್ನಗಳ (" ವಿಲಾಸಿ ವಸ್ತುಗಳ")ಮೇಲೆ ಮಾತ್ರ ಪರಿಣಾಮ ಬೀರುವುದಾದರೆ ಆಗ ಅದು ಇದ್ದಂತೆ ಉಳಿಯುತ್ತದೆ. ರೆಕಾರ್ಡ್ ಅವರ ಅಭಿಪ್ರಾಯಗಳು ಖಚಿತವಾಗಿಯೂ ಸರಿಯೆಂದು ಕಳೆದ ಶತಮಾನದ ಮಧ್ಯಭಾಗದಲ್ಲಿ ಪಾಲ್ ಎ ಸ್ಯಾಮ್ಯುಯೆಲ್ಸನ್, ಪಿಯೆರೊ ಸ್ರಾಫಾ ಮತ್ತು ನೊಬುವೊ ಒಕಿಶಿಯೋ ಇವರುಗಳು(1927-2003) ಸಾಬೀತು ಮಾಡಿದರು.

## ಸರಳ ಮತ್ತು ವಿಸ್ತೃತ ಪುನರುತ್ಪಾದನೆ

---------------

ತಮ್ಮ ಕ್ಯಾಪಿಟಲ್ ಗ್ರಂಥದ ಎರಡನೆಯ ಸಂಪುಟದಲ್ಲಿ ಮಾರ್ಕ್ಸ್ ಕಿನೆಯ ಟ್ಯಾಬ್ಲ್ಯೂ ಎಕನಾಮಿಕ್ ಅನ್ನು ಅನುಸರಿಸಿ ಆರ್ಥಿಕತೆಯಲ್ಲಿನ ವಿಭಿನ್ನ ಉತ್ಪಾದನಾ ವಲಯಗಳ ನಡುವೆ ಇರುವ ಅಂತರ್-ಅವಲಂಬನೆಯನ್ನು ಅಧ್ಯಯನ ಮಾಡಿದನು. ಈ ಉದ್ದೇಶಕ್ಕಾಗಿ ಅವನು ಸರಳ ಮತ್ತು ವಿಸ್ತೃತ ಪುನರುತ್ಪಾದನೆಯ ಮಾದರಿಗಳ ಮೇಲೆ ವಿಶದವಾಗಿ ಚರ್ಚಿಸಿ ಆರ್ಥಿಕತೆಯನ್ನು ಉತ್ಪಾದನಾ ಸಾಧನಗಳನ್ನು ಉತ್ಪಾದಿಸುವ ಹಾಗೂ ಎರಡನೆಯದಾಗಿ ವೇತನ ಪದಾರ್ಥಗಳನ್ನು ಉತ್ಪಾದಿಸುವ ಹಾಗೂ ಮೂರನೆಯದಾಗಿ ವಿಲಾಸಿ ವಸ್ತುಗಳನ್ನು ಉತ್ಪಾದಿಸುವ ವಲಯಗಳನ್ನಾಗಿ ವಿಭಜಿಸಿಕೊಂಡನು. ಈ ವಲಯಗಳು ಯಾವ ಸಮತೋಲನ ಸ್ಥಿತಿಗಳಲ್ಲಿ, ಒಂದರ ಜೊತೆ ಇನ್ನೊಂದು ಮುಂದಡಿಯಿಡುತ್ತಾ ಹಿಗ್ಗಿಕೊಳ್ಳುತ್ತವೆ ಎಂಬುದನ್ನು ಕಂಡುಹಿಡಿದು ಆರ್ಥಿಕ ಬೆಳವಣಿಗೆಯ ಪ್ರಪ್ರಥಮ ಬಹುವಲಯ ಮಾದರಿಯನ್ನು ಅಭಿವೃದ್ಧಿಪಡಿಸಿದನು.

ಈ ಮಾದರಿಯ ಉದ್ದೇಶವು ಎರಡು ರೀತಿಯದಾಗಿತ್ತು. ಮೊದಲನೆಯದಾಗಿ ಅದು ಅವನಿಗೆ ಬಂಡವಾಳ ಸಂಗ್ರಹಣೆಯ ಹಾಗೂ ಆರ್ಥಿಕ ವ್ಯವಸ್ಥೆಯ ವಿಸ್ತರಣೆಯ ಕಠಿಣ ಸಮಸ್ಯೆಯನ್ನು ಅನ್ವೇಷಿಸಲು ಅವಕಾಶ ಮಾಡಿಕೊಟ್ಟಿತು. ಮೊದಲಿಗೆ ಎಲ್ಲ ವಲಯಗಳಲ್ಲಿಯೂ ಬಂಡವಾಳದ ಸಾವಯವ ಸಂಯೋಜನೆಗಳು ಒಂದೇ ರೀತಿ ಇರುತ್ತವೆ ಎಂದು ಭಾವಿಸುತ್ತಾ ತಾಂತ್ರಿಕ ಪ್ರಗತಿಯನ್ನು ಪಕ್ಕಕ್ಕೆ ಇರಿಸುವುದರ ಮೂಲಕ ಅವನು ಇದನ್ನು ಮೊದಲಿಗೆ ಕೈಗೆತ್ತಿಕೊಂಡನು. ಹೆಚ್ಚುತ್ತಿರುವ ಸಾವಯವ ಸಂಯೋಜನೆಗಳಲ್ಲಿ ಪ್ರತಿಬಿಂಬಿತವಾಗುವ ತಾಂತ್ರಿಕ ಬದಲಾವಣೆಯಲ್ಲಿ ಇರುವ ಬಂಡವಾಳ ಸಂಗ್ರಹಣೆಯನ್ನು ವಿಶ್ಲೇಷಿಸಲು ಇದೊಂದು ಸಿದ್ಧತಾ ಮುಂದಡಿ ಆಗಿತ್ತು ಅಷ್ಟೇ. ಖಾಸಗಿ ವಿಕೇಂದ್ರಿತ ಆರ್ಥಿಕತೆಯಲ್ಲಿನ ವಿಭಿನ್ನ ವಲಯಗಳಲ್ಲಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ಆಗುವ ತಾಂತ್ರಿಕ ಬದಲಾವಣೆಯ ವಿಭಿನ್ನ ರೀತಿಗಳು ಮತ್ತು ವೇಗಗಳಿಂದಾಗಿ ಸಮನ್ವಯದ ಸಮಸ್ಯೆಯು

ವಿಪರೀತ ಕಷ್ಟವಾಯಿತು. ಮತ್ತು ಪ್ರಾಯಶಹ ಘಟಿಸಲಿರುವ ಸಮನ್ವಯ ವೈಫಲ್ಯಗಳ ಮೂಲವನ್ನು ಬಯಲಿಗೆಳೆಯುವುದರಲ್ಲಿ ಮಾರ್ಕ್ಸ್ ತೀವ್ರವಾಗಿ ಆಸಕ್ತರಾಗಿದ್ದರು. ಆ ಮಾದರಿಯ ಎರಡನೆಯ ಉದ್ದೇಶವೆಂದರೆ, ಇದು ಮಾರ್ಕ್ಸ್ ನಿಗ ಪುನರುತ್ಪಾದನೆಯು ಏಕೆ ವಿಫಲವಾಗಬಹುದು ಮತ್ತು ಆರ್ಥಿಕ ಬಿಕ್ಕಟ್ಟುಗಳು ಏಕೆ ಹುಟ್ಟಿಕೊಳ್ಳುತ್ತವೆ ಎಂಬುದನ್ನು ಅಧ್ಯಯನ ಮಾಡಲು ಅವಕಾಶ ನೀಡಿತು. ಮಾರ್ಕ್ಸ್ ನ ಪ್ರಕಾರ ಬಂಡವಾಳವಾದವು ಬಿಕ್ಕಟ್ಟಿಗೆ ತುತ್ತಾಗುವಂತಹ ವ್ಯವಸ್ಥೆಯಾಗಿದ್ದು ಈ ವಾಸ್ತವಾಂಶವನ್ನು ಅರ್ಥಮಾಡಿಕೊಳ್ಳಲು ಪುನರುತ್ಪಾದನೆಯ ಸಿದ್ಧಾಂತವು ನೆರವಾಗುತ್ತದೆ ಎಂಬುದಾಗಿತ್ತು.

ಬಿಕ್ಕಟ್ಟುಗಳಿಗೆ ಮುಖ್ಯವಾಗಿ ನಾಲ್ಕು (ಪ್ರಾಯಶಹ ಪರಸ್ಪರ ಸಂಬಂಧ ಹೊಂದಿರುವ) ಕಾರಣಗಳಿರುತ್ತವೆ ಎಂದು ಮಾರ್ಕ್ಸ್ ಗುರುತಿಸಿದನು. ಮೊದಲನೆಯದಾಗಿ ಅದು ವಲಯಗಳನ್ನು ಆಧರಿಸಿರುವ ಅಸಮಾನ ಬೆಳವಣಿಗೆಗಳಿಂದ ಉಂಟಾಗಬಹುದು: ಒಂದು ವಲಯದಲ್ಲಿ ವಿಪರೀತ ಉತ್ಪಾದನೆ ಮತ್ತು ಇನ್ನೊಂದು ವಲಯದಲ್ಲಿನ ಉತ್ಪಾದನೆಯಲ್ಲಿ ಕೊರತೆ. ಎರಡನೆಯದಾಗಿ ಬಿಕ್ಕಟ್ಟು, ಆದಾಯ ಹಂಚಿಕೆಯಲ್ಲಿರುವ ಅಸಮಾನತೆ ಹೆಚ್ಚುವುದರಿಂದಲೂ ಆಗಬಹುದು; ಹಾಗಾದಾಗ ಕಾರ್ಮಿಕರಲ್ಲಿ ಕೊಳ್ಳುವ ಶಕ್ತಿ ಸಾಕಷ್ಟಿಲ್ಲದೆ ಪರಿಣಾಮವಾಗಿ ಬಳಕೆದಾರರ ಬೇಡಿಕೆಯಲ್ಲಿ ಕೊರತೆ ಕಾಣಬಹುದು (ಕುಸಿತಗೊಂಡ ಬಳಕೆ). ಮೂರನೆಯದಾಗಿ ಅದು ಲಾಭಗಳ ಸಾಮಾನ್ಯ ದರ ಕುಸಿಯುವಿಕೆಯು ಹಠಾತ್ತಾಗಿ ಉಂಟಾಗುವುದರಿಂದ ಆಗಬಹುದು; ಹಾಗಾದಾಗ ಅದು ಬಂಡವಾಳ ಸಂಗ್ರಹದ ಉತ್ಸಾಹವನ್ನು ಕುಂಠಿತಗೊಳಿಸಿರುತ್ತದೆ. ಕೊನೆಯದಾಗಿ ಹಣ ಮತ್ತು ಸಾಲವು ಮುಖ್ಯ ಪಾತ್ರಗಳನ್ನು ವಹಿಸುವಂತೆ ಆರ್ಥಿಕತೆಯಲ್ಲಿ ಯಾವಾಗಲೂ ಸಹ ಕಡಿಮೆಯಾದ ಲಾಭದ ನಿರೀಕ್ಷೆಗಳಿಂದಾಗಿ ಪರಿಚಲನೆಯಿಂದ ನಗದು ಹಣವನ್ನು ಹಿಂತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಮಾರಾಟವು ಏರುಪೇರಾಗಿ ಬಿಕ್ಕಟ್ಟು ಸಂಭವಿಸುತ್ತದೆ.

ಅದೇನೆ ಇದ್ದರೂ ಮಾರ್ಕ್ಸ್ ಅವರು ಶಾಶ್ವತ ಬಿಕ್ಕಟ್ಟುಗಳು ಇರುವುದಿಲ್ಲ ಎಂಬುದನ್ನು ಒತ್ತಿ ಹೇಳಿದರು - ವ್ಯವಸ್ಥೆಯು ತನ್ನೊಳಗಿನ ಶಕ್ತಿಗಳನ್ನು ಮತ್ತೆ ಕ್ರಿಯಾಶೀಲಗೊಳಿಸುತ್ತದೆ ಮತ್ತು ಅದರಿಂದಾಗಿ ಅಂತಿಮವಾಗಿ ಸಹಜ ಸ್ಥಿತಿಯು ಹಿಂತಿರುಗುತ್ತದೆ. ಉದಾಹರಣೆಗೆ ಲಾಭದ ದರಗಳು ಕುಸಿದಾಗ ಮತ್ತು ಬಂಡವಾಳ ಸಂಗ್ರಹವು ನಿಧಾನವಾದಾಗ ಅದರಿಂದ ಉದ್ಭವಿಸುವ ಬಿಕ್ಕಟ್ಟು ಆರ್ಥಿಕತೆಯಲ್ಲಿನ ಬಂಡವಾಳ ಸಂಗ್ರಹದ ಭಾಗಗಳನ್ನು ನಾಶಗೊಳಿಸುತ್ತದೆ, ನಿರುದ್ಯೋಗವನ್ನು ಹೆಚ್ಚಿಸುತ್ತದೆ ಮತ್ತು ಈ ಅಂಶಗಳು ವೇತನದ ಮೇಲೆ ಒತ್ತಡ ಹಾಕಿ ಅದನ್ನು ಕೆಳಕ್ಕೆ ತಳ್ಳುತ್ತವೆ. ಪರಿಣಾಮವಾಗಿ ಲಾಭವಾಗುವ ಸಾಧ್ಯತೆಯು ( ಲಾಭದ ದರಗಳು ಕುಸಿಯುವ ಪ್ರವೃತ್ತಿಯು ಹಾಗೆಯೇ ಉಳಿದರೆ) ಮುಂಚಿನ ಮಟ್ಟಕ್ಕಲ್ಲದಿದ್ದರೂ ಚೇತರಿಸಿಕೊಳ್ಳುತ್ತದೆ. ಹೀಗಾಗಿ ಲಾಭದ ದರಗಳು ಕುಸಿಯುವ ಪ್ರವೃತ್ತಿಯ ನಿಯಮದ ಕುರಿತಾದ ಚರ್ಚೆಯಲ್ಲಿ ಮಾರ್ಕ್ಸ್ ನು ಸಹಜ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು

"ವಾಸ್ತವೀಕರಣದ ಸಮಸ್ಯೆಗಳನ್ನು" ಒಂದು ಕಡೆ ಇಟ್ಟುಕೊಂಡನು - ಎಂದರೆ ಉತ್ಪಾದನೆಯಾದ ಸರಕುಗಳು ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಮಾರಾಟವಾಗುವಂತಹ ಸಾಕಷ್ಟು ದೊಡ್ಡ ಮಾರುಕಟ್ಟೆಗಳು ಸಿಗದಿರುವುದರಿಂದ ಲಾಭವನ್ನು ವಾಸ್ತವದಲ್ಲಿ ಗಳಿಸಿಕೊಳ್ಳುವ ಸಮಸ್ಯೆಗಳು.

## ಪರಕೀಯತೆ ಮತ್ತು ಸರಕುಗಳ ಆರಾಧನೆ

ತಮ್ಮ ಎಕಾನಾಮಿಕ್-ಫಿಲಾಸಿಫಿಕಲ್ ಮ್ಯಾನುಸ್ಕ್ರಿಪ್ಟ್ಸ್ (ಆರ್ಥಿಕ ಮತ್ತು ತತ್ವಶಾಸ್ತ್ರೀಯ ಹಸ್ತಪ್ರತಿಗಳು (1843-1844) ಎಂಬ ಗ್ರಂಥದಲ್ಲಿ ತರುಣ ಮಾರ್ಕ್ಸ್ ಬಂಡವಾಳವಾದದ ಅಡಿಯಲ್ಲಿ ಉಂಟಾಗುವ ಸಾಮಾಜಿಕ ಪರಕೀಯತೆ ಮತ್ತು ಸಮತಾವಾದದ ಅಡಿಯಲ್ಲಿ ಅದು ವಿನಾಶವಾಗುವುದರ (ಹೆಗೆಲ್ ಅವರ 'ಆಫ್ ಹೆನ್ ಬುಂಗ್') ಕುರಿತಾದ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದನು. ಜರ್ಮನಿಯ ಕಾಲ್ಪನಿಕವಾದದ ಮುಖ್ಯಪ್ರತಿನಿಧಿಯೂ ಮತ್ತು ಈಗಲೂ ತಸ್ತಶಾಸ್ತ್ರಕ್ಕೆ ಸಂಬಂಧಿಸಿದಂತೆ, ಅದರಲ್ಲೂ ವಿಶೇಷವಾಗಿ ಅರ್ಥಶಾಸ್ತ್ರೀಯ ತತ್ವಶಾಸ್ತ್ರಕ್ಕೆ ಕುರಿತಾದಂತೆ ತೀವ್ರವಾದ ಚರ್ಚೆಗೆ ಒಳಪಡುವವನೂ ಆದ ಜಾರ್ಜ್ ವಿಲ್ ಹೆಲ್ಮ್ ಫ್ರೆಡರಿಕ್ ಹೆಗಲ್ (1770-1831) ನ ಕೃತಿಗಳೊಂದಿಗೆ ಮಾರ್ಕ್ಸ್ ವಿಮರ್ಶಾತ್ಮಕ ಸಂವಾದದಲ್ಲಿ ತೊಡಗಿದ ಫಲಿತಾಂಶವಾಗಿ ಹೊರಹೊಮ್ಮಿದ ಸಿದ್ಧಾಂತ ಇದು. ಮಾರ್ಕ್ಸ್ ಇಂತಹ ಆರಂಭಿಕ ಕೃತಿಗಳಲ್ಲಿ ಕಂಡುಕೊಂಡ ಪರಿಕಲ್ಪನೆಗಳು, ಅವನ ನಂತರದ ಎಲ್ಲಾ ಕೃತಿಗಳಲ್ಲಿ ಮತ್ತೆ ಹೊರಹೊಮ್ಮುತ್ತವೆ. ಬಂಡವಾಳವಾದದಲ್ಲಿ ಮೂಲಭೂತವಾಗಿ ಕಾಣಿಸಿಕೊಳ್ಳುವ private property'ಖಾಸಗಿ ಆಸ್ತಿ' ಯ ಸಂಸ್ಥೆಯೇ, ಎಲ್ಲವನ್ನು ಆವರಿಸಿಕೊಳ್ಳುವ ಪರಕೀಯತೆಯ ಮೂಲ ಎಂದು ಮಾರ್ಕ್ಸ್ ಪರಿಗಣಿಸಿದನು: ಬಂಡವಾಳವಾದದಲ್ಲಿ ಮಾನವನು ತನ್ನ ಕೆಲಸದ ಉತ್ಪನ್ನದಿಂದ ಪರಕೀಯನಾಗುತ್ತಾನೆ, ಸಹಜ ಚಟುವಟಿಕೆಯಾಗಬೇಕಾಗಿದ್ದ ಶ್ರಮದಿಂದ ಪರಕೀಯನಾಗುತ್ತಾನೆ, ಮಾನವ ಜೀವಿಯಾಗಿ ಇರಬೇಕಾಗಿದ್ದ ಸಹಜ ಗುಣದಿಂದ ಪರಕಿಯನಾಗುತ್ತಾನೆ ಮತ್ತು ಮಾನವ ಜೀವಿಗಳಾದ ಬೇರೆ ಮನುಷ್ಯರಿಂದ ಪರಕೀಯನಾಗುತ್ತಾನೆ.

ಮನುಷ್ಯರು ತಮ್ಮ ಜೊತೆಯಲ್ಲಿರುವ ಇತರ ಮನುಷ್ಯರು, ಕೇವಲ ತಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ಇರುವುದು ಎಂಬಂತೆ ಭಾವಿಸುವ ಸಾಮಾಜಿಕ ಸಂರಚನೆಗಳ ಲಕ್ಷಣವೇ ಪರಕೀಯತೆ. ಕಾರ್ಮಿಕನು ಉತ್ಪಾದಿಸುವ ಸರಕು ಆತನ/ಆಕೆಯ ಅವರಿಗಾಗಿ ಇರುವುದಿಲ್ಲ, ಬದಲಿಗೆ ಬಂಡವಾಳಗಾರನ ಹಿತಾಸಕ್ತಿಗಾಗಿ ಇರುವಂಥದ್ದು ಮತ್ತು ಬಂಡವಾಳಗಾರನಿಗೆ ಸಹ ಸರಕಿನಲ್ಲೇನೂ ಸ್ವಂತ ಆಸಕ್ತಿ ಇರುವುದಿಲ್ಲ; ಅವನ ಆಸಕ್ತಿ ಇರುವುದು ಅದು ನೀಡಬಹುದಾದ ಲಾಭದಲ್ಲಿ ಮಾತ್ರ. ಸಾಮಾಜಿಕ ಸಂಬಂಧಗಳಲ್ಲಿ ಜೊತೆಯಲ್ಲಿರುವ ಮನುಷ್ಯರ ಕುರಿತು ಪರಸ್ಪರ ಗೌರವ, ಮೆಚ್ಚುಗೆ ಇರುವುದಿಲ್ಲ: ಬದಲಿಗೆ ಪ್ರತಿಯೊಬ್ಬರೂ ಇನ್ನೊಬ್ಬ ಮನುಷ್ಯನು ತನ್ನ ಹಿತಾಸಕ್ತಿಗೆ ಎಷ್ಟು ಮಟ್ಟಿಗೆ ಪೂರಕವಾಗಿರುತ್ತಾನೆ ಎಂದು ಯೋಚಿಸುತ್ತಾರೆ. ಬಂಡವಾಳವಾದದ ಅಡಿಯಲ್ಲಿ ಮನುಷ್ಯರು

ಪದಾರ್ಥಗಳ ಕುರಿತು ಒಂದು ತೋರಿಕೆಯ/ಅರೆ ಧಾರ್ಮಿಕ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಸರಕುಗಳಿಗೆ ಹಣಕ್ಕೆ ಮತ್ತು ಬಂಡವಾಳಕ್ಕೆ ಕಾಲ್ಪನಿಕವಾದ ಹಾಗೂ ನಿಸರ್ಗಾತೀತವಾದ ಲಕ್ಷಣಗಳನ್ನು ಆರೋಪಿಸುತ್ತಾರೆ; ಉದಾಹರಣೆಗೆ ಹಣ ಮತ್ತು ಬಂಡವಾಳಗಳು ತಾವಾಗಿಯೇ ಬಡ್ಡಿ ಅಥವಾ ಲಾಭವನ್ನು ಗಳಿಸಿಕೊಡುತ್ತವೆ ಎಂದು ನಂಬುತ್ತಾರೆ. ಉತ್ಪನ್ನಗಳಿಗಿರುವ ಸರಕಿನ ಸ್ವರೂಪದಲ್ಲಿ ಮನುಷ್ಯರ ನಡುವಿನ ಅಸಮಾನ ಸಂಬಂಧಗಳ ಜಾಲವೇ ಇರುತ್ತದೆ. ಆದರೆ ಸರಕು ಆರಾಧನೆಯು ಇದನ್ನು ಮರೆಮಾಚಿರುತ್ತದೆ. ಹೀಗಾಗಿ ವ್ಯವಸ್ಥೆಯ ಶೋಷಕ ಗುಣವು ಬಚ್ಚಿಡಲ್ಪಟ್ಟಿರುತ್ತದೆ. ಸರಕು ಆರಾಧನೆಯು, ಪದಾರ್ಥಗಳ ಕುರಿತು ಮಿಥ್ಯಾ ಪ್ರಜ್ಞೆಯನ್ನು ಸೃಷ್ಟಿಸುತ್ತದೆ ಮತ್ತು ವಾಸ್ತವಿಕತೆಯನ್ನು ತಪ್ಪಾಗಿ ಗ್ರಹಿಸುತ್ತದೆ. ಮಾರ್ಕ್ಸ್ ನ  ಪ್ರಕಾರ ಮಿಥ್ಯಾ ಪ್ರಜ್ಞೆಯನ್ನು ನಾಶ ಮಾಡುವುದು ಮನುಷ್ಯನ ಸ್ವ-ವಿಮೋಚನೆಯ ಗತಿಯಲ್ಲಿ ಅನಿವಾರ್ಯವಾದ ಹೆಜ್ಜೆ.

## ಮಾರ್ಕ್ಸ್ ನ ಕೃತಿಗಳ ಪ್ರಭಾವ.

ಮಾರ್ಕ್ಸ್ ನ  ಕೃತಿಗಳ ಪ್ರಭಾವವು ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರ, ಚರಿತ್ರೆ ಮತ್ತು ಅದರಾಚೆಗೂ ಅಗಾಧವಾಗಿತ್ತು. ಅದು ಅಭಿಮಾನಿಗಳ ಹಾಗೂ ಆಪ್ತ ಅನುಯಾಯಿಗಳ  ಗುಂಪಿನಲ್ಲಿ ಸ್ಫೂರ್ತಿಯನ್ನು ತುಂಬಿ ಪ್ರೇರೇಪಿಸಿದಂತೆಯೇ ಉಗ್ರ ಟೀಕಾರರನ್ನು ಹಾಗೂ ರಾಜಿಯಾಗದ ಶತ್ರುಗಳನ್ನೂ ಸೃಷ್ಟಿಸಿತು. ಜನರ ಚಿಂತನೆಯ  ಮೇಲೆ ಪ್ರಭಾವ ಬೀರುವುದಕ್ಕೆ ಸಂಬಂಧಿಸಿದಂತೆ ಇನ್ನಾವ ಅರ್ಥಶಾಸ್ತ್ರಜ್ಞನನ್ನೂ ಮಾರ್ಕ್ಸ್ ನೊಂದಿಗೆ  ಹೋಲಿಸಲಾಗದು. ಆತನ ಪ್ರಭಾವವು ಕೇವಲ ಚಿಂತನೆ ಮತ್ತು ಪರಿಕಲ್ಪನೆಗಳ ವಲಯಕ್ಕೆ ಸೀಮಿತವಾದದ್ದಲ್ಲ. ರಾಜಕೀಯ ಚಳುವಳಿಗಳು ಆತನ ಸಂದೇಶವನ್ನು ಕೈಗೆತ್ತಿಕೊಂಡವು, ಅವುಗಳನ್ನು ರಾಜಕೀಯ ಬೇಡಿಕೆಗಳನ್ನಾಗಿ ಪರಿವರ್ತಿಸಿದವು ಮತ್ತು ಅಧಿಕಾರಕ್ಕೆ ಬಂದ ಕಡೆಯಲ್ಲಿ ಅವುಗಳನ್ನು ವಾಸ್ತವಿಕ ನೀತಿಗಳಾಗಿ ನಿರೂಪಿಸಿದವು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಕ್ರಾಂತಿಕಾರಿ  ಮಾರ್ಪಾಡುಗಳಾದ ಕಡೆಯಲ್ಲೆಲ್ಲಾ ಸಮಾಜವಾದಿ ಪ್ರಭುತ್ವಗಳನ್ನು ಸ್ಥಾಪಿಸಲಾಯಿತು ಮತ್ತು ಅದರಲ್ಲಿ 1917 ಅಕ್ಟೋಬರ್ ಕ್ರಾಂತಿಯಲ್ಲಿ ಝಾರನ ಪ್ರಭುತ್ವವನ್ನು ಕಿತ್ತು ಹಾಕಿದ ಮೇಲೆ 1922 ರಲ್ಲಿ ಸ್ಥಾಪಿತವಾದ ಸೋವಿಯತ್ ಒಕ್ಕೂಟವನ್ನು ಸೇರಿಸಬೇಕು. ಮಾರ್ಕ್ಸ್ ಮತ್ತು ಏಂಗೆಲ್ಸ್ ಸಮಾಜವಾದಿ ವ್ಯವಸ್ಥೆಯ ಆರ್ಥಿಕತೆಯ ಕುರಿತು ಬರೆದಿರುವುದು ಸಾಪೇಕ್ಷವಾಗಿ ಕಡಿಮೆಯಾದರೂ ಸಮಾಜವಾದಿ ಪ್ರಭುತ್ವಗಳು ಅವರ ಆಚಾರ್ಯ ಸದೃಶ ಮಾರ್ಗದರ್ಶನವನ್ನು ಒಪ್ಪಿಕೊಂಡವು. ಮಾರ್ಕ್ಸ್ ನು ಬಂಡವಾಳವಾದದ ವಿಶ್ಲೇಷಣೆಯನ್ನು ವಿಶದವಾಗಿ ಮಾಡಿದ್ದನೇ ಹೊರತು ಸಮಾಜವಾದಿ ಆರ್ಥಿಕತೆಯನ್ನು ನಡೆಸಲು ಬೇಕೆಂದಾಗ ಉಪಯೋಗಿಸಲಿಕ್ಕಾಗುವಂತಹ ಸಿದ್ಧಸೂತ್ರಗಳ ಕೈಪಿಡಿಯನ್ನೇನೂ ತಯಾರಿಸಿರಲಿಲ್ಲ. ಹೀಗಾಗಿ ಪ್ರಭುತ್ವ ಒಂದನ್ನು ಸಂಘಟಿಸಲು ಮತ್ತು ಕೇಂದ್ರೀಕೃತ ಯೋಜನೆಗಳನ್ನು ಹಮ್ಮಿಕೊಳ್ಳಲು

ಕಾರ್ಯಸಾಧುವಾದ ಯೋಜನೆಯನ್ನು ರೂಪಿಸುವಲ್ಲಿ ನೆರವಾಗದಿದ್ದ ಮಾರ್ಕ್ಸ್ ನ ವೈಜ್ಞಾನಿಕ ಕೃತಿಗಳನ್ನು, ಯಾರು ಮುಟ್ಟಲಾಗದ ಸತ್ಯಗಳು ತುಂಬಿದ, ಒಂದು ಸಮಾಜವಾದಿ ಮಹಾ ಸನ್ನದು (ಮ್ಯಾಗ್ನ ಕಾರ್ಟಾ) ವಿನ ಸ್ಥಾನಮಾನಕ್ಕೆ ಏರಿಸಿ, ಅದನ್ನು ಕೇವಲ ಆಂತರಿಕ ರಾಜಕೀಯ ಅಧಿಕಾರ ಹಿಡಿಯುವ ತಂತ್ರಗಾರಿಕೆಗೆ ಉಪಯೋಗಿಸಿಕೊಳ್ಳಲಾಯಿತು ಎಂಬುದರಲ್ಲಿ ಅಚ್ಚರಿ ಏನಿಲ್ಲ.

ಅದೇನೇ ಇರಲಿ, ವಿಜ್ಞಾನಿಯೂ ಮಾನವತಾವಾದಿಯು ಆಗಿದ್ದ ಮಾರ್ಕ್ಸ್ ಈ ಪ್ರಭುತ್ವಗಳಿಗೆ ಹೇಗೆ ಪ್ರತಿಕ್ರಿಸುತ್ತಿದ್ದನು ಎಂಬುದು ನಮಗೆ ಗೊತ್ತಾಗಲಾರದು, ಆದರೆ ಬಂಡವಾಳವಾದವನ್ನು ಅವನು ಎಷ್ಟು ನಿರ್ದಯವಾಗಿ ಸೂಕ್ಷ್ಮವಾಗಿ ವಿಭಜಿಸಿ ನೋಡಿ ಟೀಕಿಸಿದನೋ ಅದೇ ರೀತಿಯಲ್ಲಿ ಈ ಹೊಸ ವ್ಯವಸ್ಥೆಗಳ ಆರ್ಥಿಕ ಬುನಾದಿಗಳನ್ನು ಮತ್ತು ರಚನೆಗಳನ್ನು ವಿಮರ್ಶೆಗೆ ಒಳಪಡಿಸುತ್ತಿದ್ದನು ಎಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ತನ್ನ ಬರಹಗಳನ್ನು ಪವಿತ್ರ ಗ್ರಂಥಗಳಂತೆ ಕಾಣುತ್ತಾ ತನ್ನನ್ನು ಒಬ್ಬ ಸಂತನಂತೆ ಪೀಠದ ಮೇಲೆ ಕೂರಿಸುವುದು ಮಾತ್ರ ಮಾರ್ಕ್ಸ್ ಗೆ ಖಂಡಿತವಾಗಿ ಅಸಹನೀಯವಾಗುತ್ತಿತ್ತು.

ಮಾರ್ಕ್ಸ್ ನ ರಾಜಕೀಯ ಅರ್ಥಶಾಸ್ತ್ರದ ಕುರಿತ ಸಾಹಿತ್ಯವು ಬೃಹತ್ತಾಗಿದೆ ಮತ್ತು ಅವನ ಕೃತಿಗಳಲ್ಲಿನ ಅನೇಕ ಕಲ್ಪನೆಗಳು ಮತ್ತು ಪರಿಕಲ್ಪನೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗಿದೆ. ನಾವಿಲ್ಲಿ ಅವುಗಳಲ್ಲಿ ಕೆಲವನ್ನು ಮಾತ್ರ ಚರ್ಚೆಗೆ ತೆಗೆದುಕೊಂಡಿದ್ದೇವೆ.

ದೊಡ್ಡ ಬಂಡವಾಳವು ಸಣ್ಣ ಸಣ್ಣ ಬಂಡವಾಳಗಳನ್ನು ನುಂಗಿ, ಬಂಡವಾಳವು ಹೆಚ್ಚು ಹೆಚ್ಚು ಸಾಂದ್ರಗೊಳ್ಳುವುದರಿಂದ ಮತ್ತು ಕೇಂದ್ರೀಕರಣವಾಗುವುದರಿಂದ, ಆರಂಭಕಾಲದ ಸ್ಪರ್ಧಾತ್ಮಕ ಬಂಡವಾಳವಾದದ ಜಾಗದಲ್ಲಿ ನಿಧಾನವಾಗಿ ಟ್ರಸ್ಟ್ ಗಳ(ನ್ಯಾಸಗಳ) ಮಾದರಿಯ ಮತ್ತು ಏಕಸ್ವಾಮ್ಯವಿರುವ ಬಂಡವಾಳವಾದವು ಅಸ್ತಿತ್ವಕ್ಕೆ ಬರುತ್ತದೆ ಎಂದು ಮಾರ್ಕ್ಸ್ ಗಾಢವಾಗಿ ನಂಬಿದ್ದನು. ಅವನು ಭವಿಷ್ಯ ನುಡಿದಂತೆ ಈ ಪ್ರವೃತ್ತಿಯು ನಿಧಾನವಾಗಿ ವಾಸ್ತವವಾಯಿತು ಮತ್ತು ಬೃಹತ್ತಾದ ಟ್ರಸ್ಟ್ ಗಳು ಮತ್ತು ವಾಣಿಜ್ಯಕೂಟ ಗಳು ಜಾಯಿಂಟ್ ಸ್ಟಾಕ್ ಕಂಪನಿಗಳ ಕಾನೂನಾತ್ಮಕ ರೂಪದಲ್ಲಿ ಕಾಣಿಸಿಕೊಂಡವು. ಮಾರ್ಕ್ಸ್ ಮತ್ತು ಆತನ ಅನುಯಾಯಿಗಳು ಅನಿವಾರ್ಯ ಎಂದು ಭಾವಿಸಿದ ಲಾಭದ ದರಗಳ ಕುಸಿಯುವಿಕೆಯೊಂದಿಗೆ ಬಂಡವಾಳವಾದವು ಬೇಗನೆ ಕುಸಿಯಲಿದೆ ಎಂದು ಪ್ರತಿಪಾದಿಸುವ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು.

ರೋಜಾ ಲುಕ್ಸೆಂಬರ್ಗ್ (1871- 1919) ಮತ್ತು ಒಟೋ ಬಾವರ್ (1881-1938- ಈತ ಆಸ್ಟ್ರೋ ಮಾರ್ಕಿಸಂನ ಪ್ರಧಾನ ಪ್ರತಿಪಾದಕ) ಇವರುಗಳು ಸಾಮ್ರಾಜ್ಯವಾದವು ಬಂಡವಾಳದ ವಾದದ ಅಂತಿಮ ಹಂತ ಎಂದು ಪ್ರತಿಪಾದಿಸಿದರು. ತಮ್ಮ ತಮ್ಮ ಸ್ವಂತ ದೇಶಗಳಲ್ಲಿ ಲಾಭಗಳನ್ನು ಗಳಿಸುವ ಅವಕಾಶಗಳು ಸಂಪೂರ್ಣವಾಗಿ ಶೋಷಿಸಲ್ಪಟ್ಟ ಮೇಲೆ ರಾಷ್ಟ್ರ ಪ್ರಭುತ್ವಗಳು ವಸಾಹತುಗಳನ್ನು ರಚಿಸುವ ಮೂಲಕ ಅಗ್ಗವಾದ ಕಚ್ಚಾ ಸಾಮಗ್ರಿಗಳನ್ನು ಮತ್ತು ಸುಲಭವಾಗಿ ಲಭ್ಯವಾಗುವ

ಮಾರುಕಟ್ಟೆಗಳನ್ನು ಉಪಯೋಗಿಸಿಕೊಂಡು ಲಾಭದ ದರಗಳನ್ನು ಹೆಚ್ಚಿಸಿಕೊಳ್ಳಬಹುದು ಎಂದು ಅವರು ವಾದಿಸಿದರು. ಹಾಗಾದಾಗ ಭೂಪ್ರದೇಶಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಯುದ್ಧದ ಅಪಾಯವನ್ನು ಹೆಚ್ಚಿಸುತ್ತದೆ. ಬಂಡವಾಳವಾದದ ವಿಸ್ತರಣೆಯು ಅನಿವಾರ್ಯವಾಗಿ ದೇಶಗಳ ನಡುವಿನ ಸಂಘರ್ಷಕ್ಕೆ ಕಾರಣವಾಗುತ್ತದೆ, ಜನರ ವಿರುದ್ಧ ಜನರನ್ನು ಎತ್ತಿ ಕಟ್ಟುತ್ತದೆ ಕೊನೆಗೆ ಯುದ್ಧಗಳಲ್ಲಿ ಪರ್ಯಾವಸಾನಗೊಳ್ಳುತ್ತವೆ. ಪರಿಪೂರ್ಣ ಸ್ಪರ್ಧೆಯ ಬಣ್ಣದ ಕನ್ನಡಕದ ಮೂಲಕ ಜಗತ್ತನ್ನು ನೋಡುತ್ತಾ ಪ್ರತಿಯೊಂದು ಉದ್ಯಮದ ಆರ್ಥಿಕ ಶಕ್ತಿಯನ್ನು ಕಡೆಗಣಿಸಿ ಒಂದು ರೀತಿಯಲ್ಲಿ ಬಂಡವಾಳವಾದವನ್ನು ಸಮರ್ಥಿಸುವ ಧೋರಣೆಯನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಟೀಕಿಸಿ ಸಾಂಪ್ರದಾಯಿಕ ಅರ್ಥಶಾಸ್ತ್ರವನ್ನು ಬೂರ್ಶ್ವಾ ಎಂದು ತಿರಸ್ಕರಿಸಲಾಯಿತು.

ಪ್ರಾಯಶಹ ಮಾರ್ಕ್ಸ್ ವಾದಿ ಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟದ್ದು, 1910 ರಲ್ಲಿ ಪ್ರಕಟವಾದ ರುಡಾಲ್ಫ್ ಹಿಲ್ಫರ್ ಡಿಂಗ್ ( 1877-1941) ಅವರ 'ಫೈನಾನ್ಸ್ ಕ್ಯಾಪಿಟಲ್' ಎಂಬ ಪುಸ್ತಕ. ಆತನ ಕಾಲದಲ್ಲಿ ಅದನ್ನು 'ಬಂಡವಾಳ' ಗ್ರಂಥದ ನಾಲ್ಕನೆಯ ಸಂಪುಟ ಎಂದು ಪ್ರಶಂಸಿಸಲಾಯಿತು. ಹಿಲ್ ಫರ್ಡಿಂಗ್ ಅವರು ಆಧುನಿಕ ಬಂಡವಾಳದ ಮುಖ್ಯ ಲಕ್ಷಣಗಳನ್ನು ಕಾರ್ಟೆಲ್ ಗಳು(ಬಂಡವಾಳಗಾರರ ಸ್ವಯಂ- ನಿಯಂತ್ರಣ ಕೂಟಗಳು) ಮತ್ತು ಟ್ರಸ್ಟ್ ಗಳನ್ನು ರಚಿಸಿಕೊಳ್ಳುವುದಲ್ಲದೆ, ಬ್ಯಾಂಕಿಂಗ್ ಬಂಡವಾಳ ಮತ್ತು ಕೈಗಾರಿಕಾ ಬಂಡವಾಳ ಹೆಚ್ಚು ಹೆಚ್ಚು ಬಿಗಿಯಾಗಿ ಒಂದರೊಂದಿಗೆ ಒಂದು ಸಹಕರಿಸುತ್ತವೆ ಎಂದು ನಿರೂಪಿಸಿದರು. ಹಣಕಾಸು ಬಂಡವಾಳಕ್ಕೆ ಹೆಚ್ಚಾಗುತ್ತಿದ್ದ ಪ್ರಾಮುಖ್ಯತೆಯು, ಸಾಲ ಕೊಡುವ ಅದರ ಸಾಮರ್ಥ್ಯದಲ್ಲಿ ಮತ್ತು ಹೊಸ ಕಂಪನಿಗಳನ್ನು ಉದ್ದಿಮೆಗಳನ್ನು ಹುಟ್ಟು ಹಾಕುವುದರಲ್ಲಿ ಮತ್ತು ಪ್ರಮೋಟರ್ಸ್ (ಪ್ರವರ್ತಕ) ಲಾಭ ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳ ಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಅದು ತಾನು ಗಳಿಸಿಕೊಳ್ಳುತ್ತಿದ್ದ ಹಾಗೂ ಬಿಡುಗಡೆ ಮಾಡುತ್ತಿದ್ದ ಸ್ಟಾಕ್ ಗಳನ್ನು ಅವಲಂಬಿಸಿತ್ತು.. ಏಕೆಂದರೆ, ಬೃಹತ್ ಗಾತ್ರದ ಒಟ್ಟಾರೆ ಬಂಡವಾಳವನ್ನು, ಬ್ಯಾಂಕುಗಳು ಅವರು ಪರಸ್ಪರ ಹೊಂದಿದ್ದ ಆಸ್ತಿ ಅಧಿಕಾರಗಳಿಂದಾಗಿ (ಇಂಟರ್ಲಾಕಿಂಗ್ ಅಸೆಟ್ಸ್) ತಮ್ಮ ಇಕ್ವಿಟಿ ಬಂಡವಾಳದ ಸಾಪೇಕ್ಷವಾಗಿ ಒಂದು ಸಣ್ಣದಾದ ಭಾಗವನ್ನು ಮಾತ್ರ ನಿಯಂತ್ರಿಸಲು ಸಾಮರ್ಥ್ಯವನ್ನು ಹೊಂದಿದ್ದವು. ಹಿಲ್ಫರ್ ಡಿಂಗ್ ಅವರ ಪ್ರಕಾರ ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಸಾಮಾನ್ಯ ಕಾರ್ಟೆಲ್ ಅನ್ನು ಮತ್ತು ಬ್ಯಾಂಕಿಂಗ್ ಉದ್ಯಮದಲ್ಲಿ ಒಂದು ಏಕೈಕ 'ಕೇಂದ್ರ ಬ್ಯಾಂಕ್' ಅನ್ನು ರೂಪಿಸಿಕೊಳ್ಳುವ ಪ್ರವೃತ್ತಿ ಇತ್ತು. ಅಲ್ಲಿ ಮಾರ್ಕ್ಸ್ ಹೇಳುವಂತೆ,

"ಪ್ರಮೋಟರ್ಗಳು(ಪ್ರವರ್ತಕರು), ಸ್ಪೆಕ್ಯುಲೇಟರ್ಗಳು (ಸಟ್ಟಾ ವ್ಯಾಪಾರಿಗಳು) ಮತ್ತು ನಾಮಕಾವಸ್ತೆ ನಿರ್ದೇಶಕರು ಇವರೆಲ್ಲರೂ ಇರುವಂತಹ ಒಂದು ಹೊಸ ಹಣಕಾಸು ಕುಲೀನ ವರ್ಗ, ಒಂದು ಹೊಸ ವಿಧದ ಪರೋಪಜೀವಿಗಳು ಹೊರಹೊಮ್ಮಿದರು ಮತ್ತು ಕಾರ್ಪೊರೇಷನ್ ಅಭಿವೃದ್ಧಿ , ಷೇರು ಮಾರಾಟ

ಮತ್ತು ಶೇರಿನ ಊಹಾಪೋಹದ ಜೂಜು, ಮೋಸ ಮಾಡುವ ದಗಾಕೋರತನದ ಒಂದು ಇಡೀ ವ್ಯವಸ್ಥೆಯೇ ರೂಪುಗೊಂಡಿತು. ಖಾಸಗಿ ಆಸ್ತಿಯ ಒಡೆತನವಿಲ್ಲದ ಖಾಸಗಿ ಉತ್ಪಾದನೆ " ಕಾಣಿಸಿಕೊಂಡಿತು. ಈ ಪುಟಗಳನ್ನು ಓದಿದರೆ ಇದೆಲ್ಲಾ ಇತ್ತೀಚಿನ ಹಣಕಾಸು ಬಿಕ್ಕಟ್ಟಿನ ಬಗ್ಗೆ ಬರೆದ ವಿಶ್ಲೇಷಣೆಯೇನೋ ಎನಿಸುತ್ತದೆ. ಹಣಕಾಸು ಬಂಡವಾಳ ಮತ್ತು ಅದರ ನಿಯಂತ್ರಣದಲ್ಲಿರುವ ಕೈಗಾರಿಕಾ ಬಂಡವಾಳ ಇವುಗಳು ಪ್ರಭುತ್ವದ ಛತ್ರಿಯಡಿಯಲ್ಲಿ, ಆಶ್ರಯದಲ್ಲಿ ರಕ್ಷಣೆಯನ್ನು ಹುಡುಕಿಕೊಳ್ಳುತ್ತವೆ; ರಕ್ಷಣಾ ಕ್ರಮಗಳಿಗಾಗಿ ಅವರು ಬಯಸುವ ಪ್ರಯತ್ನಗಳು "ಸುಸಂಘಟಿತ ಬಂಡವಾಳವಾದ"ಕ್ಕೆ ಜನ್ಮ ನೀಡುತ್ತವೆ.

1942ರಲ್ಲಿ ಅಮೆರಿಕಾದ ಅರ್ಥಶಾಸ್ತ್ರಜ್ಞರಾದ ಪಾಲ್ .ಎಂ. ಸ್ವೀಜಿ (1910- 2004) ಅವರು ಮಾರ್ಕ್ಸ್ ನ ಅರ್ಥಶಾಸ್ತ್ರಕ್ಕೆ ಸಂಕ್ಷಿಪ್ತವಾದ ಆದರೆ ಸ್ಪಷ್ಟವಾದ ಪರಿಚಯವನ್ನು ತಮ್ಮ ಪುಸ್ತಕ "ದಿ ಥಿಯರಿ ಆಫ್ ಕ್ಯಾಪಿಟಲಿಸ್ಟ್ ಡೆವಲಪ್ಮೆಂಟ್" ಎಂಬುದನ್ನು ಪ್ರಕಟಿಸುವ ಮೂಲಕ ಒದಗಿಸಿದರು. ಅವರು ಮತ್ತು ಪಾಲ್. ಎ. ಬಾರನ್ (1910 -1964) ಅವರು "ಮನೋಪಲಿ ಕ್ಯಾಪಿಟಲ್- ಆನ್ ಎಸ್ಸೆ ಆನ್ ದಿ ಅಮೆರಿಕನ್ ಎಕನಾಮಿಕ್ ಅಂಡ್ ಸೋಶಿಯಲ್ ಆರ್ಡರ್" ಎಂಬ ಪುಸ್ತಕವನ್ನು 1966 ರಲ್ಲಿ ಬರೆದು ಪ್ರಕಟಿಸಿದರು. ಪುಸ್ತಕವು "ಹೆಚ್ಚುವರಿ ಹೀರಿಕೊಳ್ಳುವಿಕೆ ("surplus absorption)"ಯ ಸಮಸ್ಯೆಯ ಮೇಲೆ ಗಮನಹರಿಸುತ್ತದೆ - ಎಂದರೆ ಅಮೆರಿಕದ ಆರ್ಥಿಕತೆಗೆ ಇರುವ ಹೆಚ್ಚುವರಿ ಉತ್ಪಾದನೆಯನ್ನು ಮಾಡುವ ಅಂತರ್ಗತ ಶಕ್ತಿ ಮತ್ತು ಅದನ್ನು ವಾಸ್ತವ ರೂಪಕ್ಕೆ ಇಳಿಸುವಲ್ಲಿ ಇರುವ ವೈಫಲ್ಯ ಇವುಗಳ ಮಧ್ಯದ ಕಂದರವನ್ನು ಕುರಿತು. ಕೀನ್ಸ್ ಅವರ ವಾದವನ್ನೇ ಪ್ರತಿಬಿಂಬಿಸುವ ಪರಿಣಾಮಕಾರಿ ಲಾಭದ ಕೊರತೆಯಿಂದಾಗಿ ( ಅಧ್ಯಾಯ 9) ಬಂಡವಾಳವಾದವು ವಾಸ್ತವೀಕರಣದ ಸಮಸ್ಯೆಯಿಂದ ನರಳುತ್ತದೆ ಎನ್ನಲಾಗಿದೆ. ಇದರಿಂದಾಗಿ ಪ್ರಭುತ್ವವು ಮಧ್ಯಪ್ರವೇಶಿಸಿ, ಒಳಗಿನಿಂದಲೇ ಅಭದ್ರವಾಗಿರುವ ಆರ್ಥಿಕತೆಯನ್ನು ಭದ್ರಪಡಿಸಿ ಬಂಡವಾಳದ ಲಾಭಗಳನ್ನು ಉತ್ತಮಪಡಿಸಲು ಬೃಹತ್ ಗಾತ್ರದ ಸಾರ್ವಜನಿಕ ವೆಚ್ಚವನ್ನು ಮಾಡುತ್ತಾ ಅದರಿಂದ ಹೆಚ್ಚುತ್ತಲೇ ಹೋಗುವ ಬಜೆಟ್ ಕೊರತೆಯನ್ನು ಅನುಭವಿಸಬೇಕಾಗುತ್ತದೆ. ಬಾರನ್ ಮತ್ತು ಸ್ವೀಜಿ ಅವರು ಅಮೆರಿಕಾದಲ್ಲಿನ ಮಿಲಿಟರಿ ಬಜೆಟ್ ದೈತ್ಯಾಕಾರದಲ್ಲಿ ಹಿಗ್ಗುತ್ತಿರುವುದಕ್ಕೆ ಮಹತ್ವದ ಪಾತ್ರವನ್ನು ಆರೋಪಿಸಿದರು ಮತ್ತು ಅವರೇ ಹೇಳುವಂತೆ "ಮಿಲಿಟರಿ ಕೈಗಾರಿಕಾ ಸಂಕೀರ್ಣದ" ಉದಯದ ಬಗ್ಗೆ ಗಮನ ಸೆಳೆದರು. ಸೋವಿಯತ್ ಒಕ್ಕೂಟವು ಜಾಗತಿಕ ಮಿಲಿಟರಿ ಶಕ್ತಿಯಾಗಿ ಬೆಳೆದನಂತರ ಎರಡು ದೊಡ್ಡ ರಾಷ್ಟ್ರಗಳ ಮಧ್ಯೆ, ಜಾಗತಿಕ ರಾಜಕೀಯ ಶಕ್ತಿಯ ಪ್ರಾಬಲ್ಯಕ್ಕಾಗಿ ಶಸ್ತ್ರಾಸ್ತ್ರ ಪೈಪೋಟಿ ಆರಂಭವಾಯಿತು.

ಅಮೆರಿಕದ ಅರ್ಥಶಾಸ್ತ್ರಜ್ಞರಾದ ರಿಚರ್ಡ್. ಎಮ್. ಗುಡ್ ವಿನ್ (1913 -1996) ಅವರು ಬಂಡವಾಳವಾದವು ಆವರ್ತದ ರೀತಿಯಲ್ಲಿ ಬೆಳೆಯುವ ಅರ್ಥ ವ್ಯವಸ್ಥೆಯಾಗಿದ್ದು ಅದು ನಿಯತವಾಗಿ

ಕುಸಿಯುತ್ತದೆ, ಚೇತರಿಸಿಕೊಳ್ಳುತ್ತದೆ ಹಾಗೂ ವೃದ್ಧಿಯನ್ನು ಹೊಂದುತ್ತದೆ ಎಂಬ ಮಾರ್ಕ್ಸ್ ಅವರ ಕಲ್ಪನೆಯ ಗಣಿತದ ಮಾದರಿಯನ್ನು ವಿಶದೀಕರಿಸಿದರು. ಗುಡ್ ವಿನ್ ಅವರ ಮಾದರಿಯು, ಜೀವಶಾಸ್ತ್ರದಲ್ಲಿನ ಪರಭಕ್ಷಕ ಪ್ರಾಣಿ ಮತ್ತು ಬೇಟೆಯ ಪ್ರಾಣಿ ಸಂಬಂಧದ ಮಾದರಿಯ ಭಿನ್ನ ರೂಪವಷ್ಟೇ; ಇಲ್ಲಿ ಬಂಡವಾಳಗಾರರು ಪರಭಕ್ಷಕರಂತೆ ಹಾಗೂ ಕಾರ್ಮಿಕರು ಬೇಟೆಯಾಗುವ ಬಲಿಪಶುವಿನಂತೆ ಇರುತ್ತಾರೆ. ಲಾಭದ ದರವು ಹೆಚ್ಚಾಗಿದ್ದು ಅದಕ್ಕೆ ಸಂಬಂಧಿಸಿದಂತೆ ನೈಜ ಕೂಲಿ ದರವು ಕಡಿಮೆ ಇದ್ದಾಗ ಬಂಡವಾಳ ಸಂಗ್ರಹಣೆ ಮತ್ತು ಕಾರ್ಮಿಕರಿಗಾಗಿನ ಬೇಡಿಕೆಯ ಬೆಳವಣಿಗೆ ಹೆಚ್ಚಾಗಿರುತ್ತದೆ. ಇದರ ಪರಿಣಾಮವಾಗಿ ನಿರುದ್ಯೋಗವು ಕೆಳಗಿಳಿಯುತ್ತದೆ ಮತ್ತು ಕಾರ್ಮಿಕರ ಹಾಗೂ ಕಾರ್ಮಿಕ ಸಂಘಟನೆಗಳ ಚೌಕಾಸಿ ಸಾಮರ್ಥ್ಯವು ಬಲಗೊಳ್ಳುತ್ತದೆ. ಇದರಿಂದಾಗಿ ಕೂಲಿಯು ಹೆಚ್ಚುತ್ತದೆ ಮತ್ತು ಲಾಭದ ದರಗಳು ಕುಸಿಯುತ್ತವೆ. ಇದರ ಪರಿಣಾಮವಾಗಿ ಬಂಡವಾಳ ಸಂಗ್ರಹ ಮತ್ತು ಶ್ರಮಕ್ಕಾಗಿನ ಬೇಡಿಕೆಯು ನಿಧಾನವಾಗಿ ಕೆಳಗಿಳಿದು ಕುಸಿಯಲಾರಂಬಿಸುತ್ತದೆ. ಹೀಗಾದಾಗ ಮತ್ತೆ ಲಾಭದ ದರಗಳು ಹೆಚ್ಚುತ್ತವೆ ಈ ರೀತಿ ಇದು ಮುಂದುವರೆಯುತ್ತದೆ. ಗುಡ್ ವಿನ್ ಅವರ ಮಾದರಿಯು ಈ ರೀತಿಯಲ್ಲಿ ವ್ಯವಸ್ಥೆಯ ಒಳಗಿನಿಂದಲೇ ಆರ್ಥಿಕ ಚಟುವಟಿಕೆಯು ಏರುಪೇರಾಗುವುದನ್ನು ಮತ್ತು ಆದಾಯಗಳು ಎಂದರೆ ಲಾಭ ಮತ್ತು ಕೂಲಿಯ ಪಾಲು ಸಹ ಏರುಪೇರಾಗುವುದನ್ನು ಚಿತ್ರಿಸುತ್ತದೆ.

ಸಂಯುಕ್ತ ಸಂಸ್ಥಾನದಲ್ಲಿ ಬೋಧಕರಾಗಿದ್ದ ರಷ್ಯಾದ ಅರ್ಥಶಾಸ್ತ್ರಜ್ಞ ವ್ಯಾಸಿಲಿ ಲಿಯಾನ್ಟ್ಯೇಫ್ (1905- 1999) ಅವರ ಒಳಸುರಿ- ಹೊರಸುರಿ ವಿಶ್ಲೇಷಣೆಯು ಕ್ವೆಸ್ನೆ ಅವರ ಟ್ಯಾಬ್ಲೂ ಎಕನಾಮಿಕ್ ಮತ್ತು ಮಾರ್ಕ್ಸ್ ನ ಪುನರುತ್ಪಾದನೆಯ ಮಾದರಿಗಳತ್ತ ಹಿಂತಿರುಗಿತು. ಅದು ಕೆಲವೊಂದು ಬೆಳವಣಿಗೆಗಳ ಕುರಿತು ಅನುಭವ ಜನ್ಯ ಸಂಶೋಧನೆಯನ್ನು ನಡೆಸಲು ಮುಖ್ಯವಾದ ಸಾಧನವಾಯಿತು; ಆ ಬೆಳವಣಿಗೆಗಳೆಂದರೆ ಒಳಸುರಿಯ ವಲಯ ಆಧಾರಿತ ರಚನೆ, ಗಾತ್ರದ ಕುರಿತಾದ ಆರ್ಥಿಕ ನೀತಿ, ಕ್ರಮಗಳ ಪ್ರಭಾವ, ಹೊಸ ಉತ್ಪಾದನಾ ತಂತ್ರಜ್ಞಾನಗಳ ಪರಿಚಯಿಸುವಿಕೆ ಮತ್ತು ಪ್ರಸರಣದ ಪ್ರಭಾವಗಳು ಹಾಗೂ ವಿಭಿನ್ನ ತೆರಿಗೆ ವ್ಯವಸ್ಥೆಗಳ ಪರಿಸರ ಸಂಬಂಧಿ ಪರಿಣಾಮಗಳಾಗಿದ್ದವು.